IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಕನ್ನಡವೇ ನನ್ನ ಧರ್ಮವೆಂದ ಜಯದೇವಿತಾಯಿ ಲಿಗಾಡೆ

ಕನ್ನಡ ತಾಯಿ ನುಡಿ ಮನ್ನಿಸಿ ಮಾತನಾಡು

ಅನ್ಯಕ್ಕೆ ಮರುಳಾಗದಿರು ಮರುಳೇ

ನೀ ಕನ್ನಡಿಗನೆಂಬುದು ಮರೀಬೇಡ

ಎಂದು ಕನ್ನಡಿಗರಿಗೆ ಬುದ್ಧಿ ಹೇಳಿದ ಜಯದೇವಿತಾಯಿ ಲಿಗಾಡೆ ಅವರಿಗೆ ಕನ್ನಡ ನಾಡು, ನುಡಿಯ ಬಗ್ಗೆ ಅದಮ್ಯ ಅಭಿಮಾನ. 12ನೇ ಶತಮಾನದ ಶರಣರಂತೆ ಅನುಭಾವದ ಶಿಖರವನ್ನೇರಿದ ಜಯದೇವಿತಾಯಿ ಲಿಗಾಡೆ ಸದಾ ಕನ್ನಡ ರಾಜ್ಯೋದಯಕ್ಕಾಗಿ ಪರಿಶ್ರಮಿಸಿ, ಲೋಕೋದ್ಧಾರಕ್ಕಾಗಿ ಸಾಹಿತ್ಯ ರಚಿಸಿದ ಮಹಾಮಾತೆ.

ಗಂಭೀರವಾದ ಮುಖಮುದ್ರೆ, ಕರುಣೆ ತುಂಬಿದ ಕಂಗಳು, ವಿಶಾಲವಾದ ಹಣೆ, ಹಣೆಯ ಮೇಲೆ ಡಾಳವಾಗಿ ಕಾಣಿಸುವ ಮೂರು ಬೆರಳಿನ ವಿಭೂತಿ ನೀಳವಾದ ಮೂಗು ಭಕ್ತಿ ತುಂಬಿದ ಭಾವ ಕೊರಳಲ್ಲಿ ರುದ್ರಾಕ್ಷಿ ಸರ ಕೈಯಲ್ಲಿ ರುದ್ರಾಕ್ಷಿಯ ಕಂಕಣ ಮೈತುಂಬಾ ಖಾದಿ ಸೀರೆಗಳಿಂದ ಶೋಭಿಸುತ್ತಿದ್ದ ಜಯದೇವಿತಾಯಿ ಲಿಗಾಡೆ ಅವರು ಸೋಲ್ಲಾಪುರದಲ್ಲೇ ಅತ್ಯಂತ ಶ್ರೀಮಂತ ಮನೆತನಗಳಲ್ಲೊಂದಾದ 'ವಾರದ' ಮನೆತನದಲ್ಲಿ ಹುಟ್ಟಿ 'ಮಡಿಕಿ' ಮನೆತನದಲ್ಲಿ ಬೆಳೆದು 'ಲಿಗಾಡೆ' ಮನೆತನಕ್ಕೆ ಸೇರಿ ಹೀಗೆ ಮೂರು ಸುಪ್ರತಿಷ್ಠಿತ ಮನೆತನಗಳಿಗೆ ಸೇರಿದವರು ಜಯದೇವಿತಾಯಿ ಲಿಗಾಡೆಯವರು.

ಜಯದೇವಿತಾಯಿ ಲಿಗಾಡೆ ಅವರ ತಾತ ವಾರದ ಮಲ್ಲಪ್ಪನವರು ಮೂಲತಃ ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಶಿರ್ಸಿಯಿಂದ ಸೋಲ್ಲಾಪುರಕ್ಕೆ ಹೋಗಿ ನೆಲೆಸಿದವರು. ಮಲ್ಲಪ್ಪ ವಾರದ ಅವರು ಆಗಿನ ಕಾಲದಲ್ಲೇ ಅಂತರರಾಷ್ಟ್ರೀಯ ವ್ಯಾಪಾರಿಯಾಗಿದ್ದು, "ಸಾವಿರಾರು ಎಕರೆ ಹೊಲ, ನೂರಾರು ಎತ್ತುಗಳ ಬೇಸಾಯ, ಹತ್ತಾರು ನೂಲು, ಜವಳಿ ಗಿರಣಿಗಳ ಉದ್ಯಮಿಯಾಗಿದ್ದರು." ಆಗಿನ ಬ್ರಿಟೀಷ್ ಸರ್ಕಾರ ಮಲ್ಲಪ್ಪ ವಾರದ ಅವರಿಗೆ 'ರಾವ್‌ಬಹದ್ದೂರ್' ಬಿರುದನ್ನು ನೀಡಿ ಗೌರವಿಸಿತ್ತು. ರಾವ್‌ಬಹದ್ದೂರ್ ಮಲ್ಲಪ್ಪ ವಾರದ ಅವರಿಗೆ 'ಬಸವ್ವ ಬಾಯಿ ವಾರದ' ಮತ್ತು 'ಗೌರವ್ವಬಾಯಿ ವಾರದ' ಎಂಬ ಪತ್ನಿಯರಿದ್ದರು. ವಾರದ ಮಲ್ಲಪ್ಪನವರು ತಮ್ಮ ಮಗಳಾದ ಸಂಗವ್ವ ಬಾಯಿಯನ್ನು ಸೋಲ್ಲಾಪುರದ ಮೊತ್ತೊಂದು ಪ್ರತಿಷ್ಠಿತ 'ಮಡಿಕೆ' ಮನೆತನದ 'ಚನ್ನಬಸಪ್ಪ ಮಡಿಕೆ' ಅವರಿಗೆ ವಿವಾಹ ಮಾಡಿಕೊಟ್ಟಿದ್ದರು. 23–6–1912ರಲ್ಲಿ ಸಂಗವ್ವ ಬಾಯಿ ಮಡಿಕೆ ಮತ್ತು ಚನ್ನಬಸಪ್ಪ ಮಡಿಕೆ ದಂಪತಿಗಳಿಗೆ ಮಗಳಾಗಿ ಜಯದೇವಿಯವರು ಜನಿಸಿದರು. ಜಯದೇವಿ ಅವರ ಜೀವನದಲ್ಲಿ ತಾತನ 'ವಾರದ', ತಂದೆಯ 'ಮಡಿಕೆ', ಗಂಡನ 'ಲಿಗಾಡೆ' ಮನೆತನಗಳು ಎಷ್ಟು ಮುಖ್ಯವೊ ಅಷ್ಟೇ ಪ್ರಮುಖವಾದವು ಇಂದ್ರಭವನ, ಜಯನೀಕೇತನ ಹಾಗೂ ಭಕ್ತಿಭವನಗಳು.

## ಇಂದ್ರಭವನ

ವಾರದ ಮಲ್ಲಪ್ಪನವರು ಸೋಲ್ಲಾಪುರದಲ್ಲಿ ಸಾಕ್ಷಾತ್ ದೇವೇಂದ್ರನ ಅಮರಾವತಿಯ ಇಂದ್ರಭವನದಂತ ಅರಮನೆಯನ್ನು ಕಟ್ಟಿಸಿ ಅದಕ್ಕೆ ಅನ್ವರ್ಥವೆನ್ನುವಂತೆ 'ಇಂದ್ರಭವನ' ಹೆಸರನ್ನು ಸಹ ಇಟ್ಟಿದ್ದರು. ಇಂದ್ರಭವನ ಎಷ್ಟು ವಿಸ್ತಾರವಾಗಿತ್ತೆಂದರೆ ಅದರೊಳಗೆ ಸಂಸ್ಕೃತ ಪಾಠ ಶಾಲೆ, ವೀರಶೈವ ಮಹಿಳಾ ಜ್ಞಾನಮಂದಿರ ಹಾಗೂ ನಾನೂರು ವಿದ್ಯಾರ್ಥಿಗಳಿಗೆ ಉಚಿತ ಊಟವಸತಿಯ ಬೋರ್ಡಿಂಗ್ ವ್ಯವಸ್ಥೆ, 'ಸರಸ್ವತಿ ಜ್ಞಾನಮಂದಿರ' ಎಂಬ ವಾಚನಾಲಯ ಮೊದಲಾವು ಇಂದ್ರಭವನದಲ್ಲಿದ್ದೂ; ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗಿನ ವಿಶೇಷ ವಾಸ್ತುಶಿಲ್ಪ ವಿನ್ಯಾಸಗಳಿಂದ ಕೂಡಿತ್ತು. ಈ ಇಂದ್ರಭವನದ ಮಾಲಿಕರಾಗಿದ್ದ ವಾರದ ಮಲ್ಲಪ್ಪನವರು ಅಕ್ಷರಶಃ ಇಂದ್ರರಾಗಿ ಅಂದಿನ ಸೋಲ್ಲಾಪುರದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಅಲ್ಲದೆ ಸಾಂಸ್ಕೃತಿಕವಾಗಿ ಆಳುತ್ತಿದ್ದರು. ವಾರದ ಮಲ್ಲಪ್ಪನವರನ್ನು ಜನರೆಲ್ಲಾ ಸೊಲ್ಲಾಪುರದ ಧಣಿ, ಸೊಲ್ಲಾಪುರದ ನಗರ ಭೂಷಣ ಇತ್ಯಾದಿಯಾಗಿ ಕರೆಯುತ್ತಿದ್ದರೂ ವಾರದ ಮಲ್ಲಪ್ಪನವರು ಮೂಲತಃ ಉದಾರ ಸಂಸ್ಕೃತಿಯ ಪ್ರತಿರೂಪಿಗಳಾಗಿದ್ದರು. ಹೀಗೆ ಭೌತಿಕ ಶ್ರೀಮಂತಿಕೆ ಮತ್ತು ಅಭೌತಿಕ ಹೃದಯ ಶ್ರೀಮಂತಿಕೆಗಳನ್ನು ಹೊಂದಿದ್ದ ಅಪರೂಪದ ವ್ಯಕ್ತಿ ವಾರದ ಮಲ್ಲಪ್ಪನವರು ಶರಣರಂತೆ "ನಡೆದಂತೆ ನುಡಿಯುವ, ನುಡಿದಂತೆ ನಡೆಯುವ" ಕಾಯಕ, ದಾಸೋಹ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಬದುಕುತ್ತಿದ್ದರು. ದಾನ, ದಾಸೋಹ, ಸತ್ಯ, ಧರ್ಮ, ಸೇವೆ, ಸಹಕಾರ,

ಪರೋಪಕಾರ ಮುಂತಾದ ಗುಣಗಳು ವಾರದ ಮಲ್ಲಪ್ಪನವರಲ್ಲಿ ಸಹಜಸಿದ್ಧವಾಗಿದ್ದವು. ಅಲ್ಲದೆ ಕಲೆ, ಸಾಹಿತ್ಯ, ಶಿಕ್ಷಣ, ಸಂಸ್ಕೃತಿ... ಮೊದಲಾದವುಗಳನ್ನು ಉಳಿಸಿಕೊಂಡು, ಬೆಳೆಸಿಕೊಂಡು, ನಡೆಸಿಕೊಂಡು ಹೋಗುತ್ತಿದ್ದರು.

1910ರಲ್ಲಿ ವೀರಶೈವ ಮಹಿಳಾ ಜ್ಞಾನಮಂದಿರ ಎಂಬ ಶೈಕ್ಷಣಿಕ ಸಂಸ್ಥೆಯನ್ನು ತಮ್ಮ ಇಂದ್ರಭವನದಲ್ಲಿ ಸ್ಥಾಪಿಸಿದ್ದ ವಾರದ ಮಲ್ಲಪ್ಪನವರು ಅಲ್ಲಿ ತಮ್ಮ ಪತ್ನಿಯರನ್ನು ಅಧ್ಯಕ್ಷರನ್ನಾಗಿ ಮಗಳು ಸಂಗವ್ವನನ್ನು ಕಾರ್ಯದರ್ಶಿಯನ್ನಾಗಿ ಮಾಡಿ ಇಪ್ಪನೇ ಶತಮಾನದ ಆರಂಭದಲ್ಲಿ ಮಹಿಳಾ ಶಿಕ್ಷಣ ಕ್ರಾಂತಿ ಮಾಡಿದ್ದರು. ಆ ಸಂಸ್ಥೆಯಲ್ಲಿ ಮಹಿಳೆಯರಿಗೆ ಕಾಲದ ಅವಶ್ಯಕತೆಗನುಗುಣವಾದ ಶೈಕ್ಷಣಿಕ ಮತ್ತು ಧಾರ್ಮಿಕ ಜ್ಞಾನವನ್ನು ಬೋಧಿಸಲಾಗುತಿತ್ತು. ಸ್ತ್ರೀಯರಿಗೆ ಪ್ರಸೂತಿಯಂತ ಪ್ರಥಮ ಚಿಕಿತ್ಸೆಯನ್ನು, ಕಸೂತಿ, ಕಲೆ–ಕೌಶಲ್ಯ, ಹೊಲಿಗೆ ಮುಂತಾದವುಗಳನ್ನು ಸಹ ಕಲಿಸಲಾಗುತ್ತಿತ್ತು. ಇಂತಹ ಮಹಾನ್ ಸ್ತ್ರೀ ಚಿಂತಕರಾದ ವಾರದ ಮಲ್ಲಪ್ಪನವರ ಮುದ್ದಿನ ಮೊಮ್ಮಗಳಾಗಿದ್ದ ಜಯದೇವಿಯವರು ಶ್ರೀಮಂತೆಯಾಗಿ ಬೆಳೆಯುವುದಕ್ಕಿಂತಲೂ ಸಂಸ್ಕೃತಿಶೀಲರಾಗಿ ಬೆಳೆದರು. "ಅವ್ವ ಹಾಗೂ ಅಜ್ಜಿಯರ ಸಮಾಜಸೇವಾಗುಣ; ಲಕ್ಷ್ಮಿ ಇರಲಿ ಇಲ್ಲದಿರಲಿ ಮೃತ್ಯು ನಿಶ್ಚಿತವಾಗಿದ್ದರೂ ಸಜ್ಜನರು ಸನ್ಮಾರ್ಗ ಬಿಟ್ಟು ಹೋಗಲಾರರೆಂಬ ತಂದೆ ಚೆನ್ನಬಸಪ್ಪ ಮಡಿಕೆಯವರ ಸಂದೇಶ" ಇತ್ಯಾದಿಗಳೆಲ್ಲವೂ ಜಯದೇವಿಯವರಿಗೆ ಬಾಲ್ಯದಲ್ಲಿಯೇ ಕುಡಿಯೊಡೆದಿದ್ದುದರಿಂದ ಪ್ರವಚನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜಯದೇವಿ ಶರಣರ ವಚನಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದಳು. ಅಲ್ಲದೆ ಬಾಲ್ಯದಲ್ಲಿಯೇ ಅತ್ಯಂತ ಶ್ರದ್ಧಾಭಕ್ತಿಯಿಂದ ಜಯದೇವಿ ಲಿಂಗಪೂಜೆ ಮಾಡಿಕೊಳ್ಳುವುದನ್ನು ಕಂಡವರು ಏನು ಭಕ್ತಿ, ಏನು ನಿಷ್ಠೆ, ಅಕ್ಕಮಹಾದೇವಿಯ ಲಿಂಗಪೂಜೆಯನ್ನು ನೆನಪಿಸುತ್ತದೆ ಎಂದು ಉದ್ಗಾರವೆತ್ತುತ್ತಿದ್ದರು. ಹೀಗೆ ಸುಸಂಸ್ಕೃತಳಾಗಿ ಬೆಳೆಯುತ್ತಿದ್ದ ಜಯದೇವಿಗೆ ಹನ್ನೆರಡು ವರ್ಷವಿರುವಾಗ ಲಿಗಾಡೆ ಮನೆತನವು ಸೇರಿದಂತೆ ಮದುವೆ ಪ್ರಸ್ತಾಪಗಳು ಬರತೊಡಗಿದವು. ಆದರೆ ಜಯದೇವಿ ತಂದೆಯಾದ ಚನ್ನಬಸಪ್ಪ ಮಡಿಕೆಯವರು ಲಿಗಾಡೆ ಮನೆತನಕ್ಕೆ ಮದುವೆ ಮಾಡಿಕೊಡಲು ಎರಡು ವರ್ಷ ಆಲೋಚಿಸಿ ಕೊನೆಗೆ ಜಯದೇವಿಗೆ 'ಹದಿನಾಲ್ಕು' ವರ್ಷವಾದಾಗ 'ಹದಿನಾರು' ವರ್ಷದ ಚನ್ನಮಲ್ಲಪ್ಪಲಿಗಾಡೆಗೆ ಮದುವೆ ಮಾಡಿಕೊಡುತ್ತಾರೆ.

### ಜಯನಿಕೇತನ

ಜಯದೇವಿ ಗಂಡ ಚನ್ನಮಲ್ಲಪ್ಪಲಿಗಾಡೆ ಅವರ ಮನೆ ಹೆಸರು 'ಜಯನಿಕೇತನ'. ಲಿಗಾಡೆ ಮನೆತನವೂ ಆಗರ್ಭ ಶ್ರೀಮಂತಿಕೆಯ ಮನೆತನ. "ಮೂರು ಸಾವಿರ ಎಕರೆ ಹೊಲ, ದೊಡ್ಡ ಎಸ್ಟೇಟು, ಆಗ ಬ್ಯಾಂಕುಗಳಿಲ್ಲದ ಕಾರಣ ಸುತ್ತ ನಾಲ್ಕಾರು ತಾಲೋಕುಗಳಿಗೆ ಲೇವಾದೇವಿ/ಫೈನಾನ್ಸ್ ಹೊಂದಿದ್ದರು. ಜಯದೇವಿ ಮಾವನಿಗೆ 'ಐದು' ಜನ ಪತ್ನಿಯರಾದ ಕಾರಣ ಜಯದೇವಿಯವರಿಗೆ ಐದು ಜನ ಅತ್ತೆಯಂದಿರು. ಸ್ವಂತ ಅತ್ತೆ ಪರ್ಯಾಗಬಾಯಿ ಸೇರಿದಂತೆ ಐವರು ಅತ್ತೆಯಂದಿರು ಗಂಡನೊಂದಿಗೆ ಸೇರಿ ಜಯದೇವಿಯವರಿಗೆ ಹಲವಾರು ರೀತಿಯ ಸಂಕಷ್ಟಗಳನ್ನು ನೀಡುತ್ತಿದ್ದರು. ಸೊಲ್ಲಾಪುರದಲ್ಲೇ ಹತ್ತನೆರಡು ಅಪರಿಮಿತ ಶ್ರೀಮಂತರಾಗಿದ್ದ ವಾರದ ಮತ್ತು ಮಡಿಕೆ ಮನೆತನಗಳಲ್ಲಿ ಹುಟ್ಟಿ, ಬೆಳೆದು; ಅಷ್ಟೇ ಶ್ರೀಮಂತ ಮನೆತನಕ್ಕೆ ಮದುವೆಯಾಗಿದ್ದರೂ ಜಯದೇವಿಯವರು ವಿವಾಹ ನಂತರ ಅನೇಕ ಸಂಕಷ್ಟಗಳನ್ನು ಅನುಭವಿಸಬೇಕಾಯಿತು. ಕಾರಣವೆಂದರೆ; ಜಯದೇವಿಯನ್ನು ಮದುವೆ ಮಾಡಿಕೊಡಲು ಅವರ ತಂದೆ ಎರಡು ವರ್ಷ ಏಕೆ ಸತಾಯಿಸಿದರು ಎಂಬುದು ಒಂದು ಕಾರಣವಾದರೆ, ಜಯದೇವಿ ತಾಯಿ ಸಂಗವ್ವ ಮಡಿಕೆಯವರು ಒಳ್ಳೆಯ ವಾಗ್ಮಿ, ಪ್ರವಚನಗಾರ್ತಿಯಾಗಿದ್ದರಿಂದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಹಾಗಾಗಿ ಮಗಳು ಸಹ ಮನೆಬಿಟ್ಟು ತಿರುಗಲು ಹೋಗತ್ತಾಳೆಂಬ ಎರಡು ಸಂಕುಚಿತ ಕಾರಣಗಳಿಂದ ಅತ್ತೆಯಂದಿರು ಮತ್ತು ಗಂಡ ಹಲವಾರು ರೀತಿಯ ಕಷ್ಟಗಳನ್ನು ಕೊಡುತ್ತಿದ್ದರು. ಜಯದೇವಿಯವರಿಗೂ ತಮ್ಮ ತಾರುಣ್ಯದಲ್ಲಿ ವಯೋಸಹಜವಾಗಿ ಎಲ್ಲರಂತೆ ಉಡಬೇಕು ತೊಡಬೇಕೆಂಬ ಆಸೆಗಳಿದ್ದವು. ಆದರೆ ಗಂಡನ ಮನೆಯಲ್ಲಿ ಉಡುವಂತಿಲ್ಲ, ತೊಡುವಂತಿಲ್ಲ. ಮನೆಯ ಪಡಸಾಲೆಗೂ ನಡೆಯುವಂತಿಲ್ಲ, ಯಾರೊಡನೆಯೂ ನುಡಿಯುವಂತಿಲ್ಲ. ಆಳು–ಕಾಳುಗಳು, ಬರುವವರು ಹೋಗುವವರ ದೊಡ್ಡ ತುಂಬು ಸಂಸಾರದಲ್ಲಿ ಜಯದೇವಿಯವರು ಬೆಳಗ್ಗೆ ನಾಲ್ಕು ಗಂಟೆಗೆದ್ದು ಪ್ರಾರಂಭಿಸಿದ ಕೆಲಸ ಸರಿರಾತ್ರಿ ಹನ್ನೆರಡು ಗಂಟೆಯಾದರೂ ಪುರುಸೊತ್ತಿಲ್ಲದೆ ಮುಗಿಯುತ್ತಿರಲಿಲ್ಲ. ಹೀಗೆ ನಿರಂತರ ದುಡಿಮೆಯಿಂದ ಬಳಲಿ ಬೆಂಡಾಗಿ ರಾತ್ರಿ ಹನ್ನೆರಡಕ್ಕೆ ಮಲಗಲು ಬಂದ ಮೇಲೂ ಗಂಡ ಚನ್ನಮಲ್ಲಪ್ಪನ ಕಾಲು ಒತ್ತಬೇಕು, ಅವರ ಸೇವೆ ಮಾಡಬೇಕು. ಅಲ್ಲದೆ ಗಂಡನಿಗೂ ಅತ್ತೆರು ಚಾಡಿ ಹೇಳಿ ಕಿರುಕೂಳ ಕೊಡಿಸುತ್ತಿದ್ದರು. ಎಷ್ಟೋ ಬಾರಿ ಚನ್ನಮಲ್ಲಪ್ಪ ಲಿಗಾಡೆ ಜಯದೇವಿಯವರಿಗೆ ಹಿಡೀರಾತ್ರಿ ನಿಂತುಕೊಂಡಿರುವ ಶಿಕ್ಷೆ ಕೊಡುತ್ತಿದ್ದರಿಂದ ಜಯದೇವಿಯವರು ನಿಂತು ನಿಂತು ಸಾಕಾಗಿ ಮನೆಯಂಗಳದಲ್ಲಿ ಕುಸಿದುಬಿದ್ದರೂ ಉಪಚರಿಸುವವರಿಲ್ಲದೆ ರಾತ್ರಿಯೆಲ್ಲ ಅಲ್ಲೆ ಮಲಗಿರುದ್ದರು.

ಚನ್ನಮಲ್ಲಪ್ಪ ಲಿಗಾಡೆ ಅವರ ತಮ್ಮ ಬಹುಶಃ 'ಜಗದೀಶ ಲಿಗಾಡೆ'ಗೂ ಮದುವೆಯಾಯಿತು. ಅತ್ತೆಯಂದಿರು ಆ ಸೊಸೆಯ ಮೇಲೂ ದಬ್ಬಾಳಿಕೆ, ದೌರ್ಜನ್ಯ ಮಾಡಹೊದರು. ಆದರೆ ಕಿರಿಯಸೊಸೆ ಸೇರಿಗೆ ಸವಾಸೇರೆಂಬತೆ ಸೆಟೆದುನಿಂತರು. ಆಗ ಮನೆಮಂದಿಗೆಲ್ಲ ಜಯದೇವಿ ಅವರ ಸಹನೆ, ಸಂಯಮಗಳೆಲ್ಲಾ ಅರ್ಥವಾಗಿ ಜಯನಿಕೇತನ ಮನೆಯ ಅಚ್ಚುಮೆಚ್ಚಿನ ವ್ಯಕ್ತಿಯಾದರು. ಆದರೆ ಆ ವೇಳೆಗೆ ಜಯದೇವಿಯವರಿಗೆ ತಾರುಣ್ಯದಲ್ಲಿನ ಬಯಕೆಗಳಾದ ಉಡುವ, ತೊಡುವ, ಉಂಣ್ಣುವ ಯಾವ ಭೋಗಾಸಕ್ತಿಗಳು ಉಳಿಯದೆ ವೈರಾಗ್ಯಭಾವ ಮೂಡಿತ್ತು. "ಆಗುವುದೆಲ್ಲಾ ಒಳಿತೇ ಆಯಿತೆಂಬಂತೆ" ಅಂದಿನಿಂದ ಜಯದೇವಿಯವರು ತಮ್ಮ ಮೈಮೇಲೆ ಒಂದು ಗ್ರಾಂ ಚಿನ್ನ ಸೇರಿದಂತೆ ಒಂದು ಮೂಗುನತ್ತನ್ನು ಧರಿಸದೇ ಅಪ್ಪಟ ಶರಣೆಯಂತೆ, ನಿಜವಾದ ಗಾಂಧಿ ಅನುಯಾಯಿಯಂತೆ ಮೈತುಂಬಾ ಖಾದಿ ಸೀರೆ, ರುದ್ರಾಕ್ಷಿ ಸರ ಮತ್ತು ರುದ್ರಾಕ್ಷಿ ಕಂಕಣವನ್ನು ಬಹಳ ಪ್ರೀತಿಯಿಂದ ಧರಿಸಿ ಕೊನೆಯವರೆಗೂ ಅದನ್ನೇ ಕಾಪಾಡಿಕೊಂಡು ಬಂದರು.

ಹೀಗೆ ಜಯದೇವಿಯವರೆಂದರೆ "ಗಂಭೀರವಾದ ಮುಖಮುದ್ರೆ ಕರುಣೆ ತುಂಬಿದ ಕಂಗಳು ವಿಶಾಲವಾದ ಹಣೆ ಹಣೆಯ ಮೇಲೆ ಡಾಳಾಗಿ ಕಾಣಿಸುವ ಮೂರು ಬೆಟ್ಟಿನ ವಿಭೂತಿ ನೀಳವಾದ ಮೂಗು ಭಕ್ತಿ ತುಂಬಿದ ಭಾವ ಕೊರಳಲ್ಲಿ ರುದ್ರಾಕ್ಷಿ ಸರ ಕೈಯಲ್ಲಿ ರುದ್ರಾಕ್ಷಿಯ ಕಂಕಣ ಮೈತುಂಬ ಖಾದಿ ಸೀರೆ" ಯಿಂದ ಜಯದೇವಿ ಲಿಗಾಡೆಯವರು ಶೋಭಿಸುತ್ತಿದ್ದರು. ಇಂಥ ಧವಳವಸ್ತ್ರದ ನಿರಾಡಂಬರ ವೇಷ, ಗಂಭೀರ ವರ್ಚಸ್ಸಿನ ಅಸ್ಖಲಿತವಾಗಿ ರೂಪುಗೊಂಡ ಒಬ್ಬ ತಪಸ್ವಿನಿಯ ಪೂರ್ಣ ವ್ಯಕ್ತಿತ್ವ ಹಾಗೂ ತ್ರಿಪದಿ ಸಾಂಗತ್ಯವನ್ನು ಕುರಿತು ಡಾ. ರಾಮಕೃಷ್ಣ ಮರಾಠಿ ಅವರು ಹೀಗೆ ಬರೆದಿದ್ದಾರೆ. "ತಾಯಿ ಅವರ ಹಣೆಗೆ ಮೂರು ಬೆರಳಿನ ವಿಭೂತಿ

ಶಿವನ ಪೂಜೆಗೆ ಮೂರು ದಳದ ಪತ್ರೆ

ಅವರ ಅನುಭಾವಿಕ ಅಭಿವ್ಯಕ್ತಿಗೆ ಮೂರು ಸಾಲಿನ ತ್ರಿಪದಿ

ಒಂದನ್ನು ತಾನು ಧರಿಸಿ, ಮತ್ತೊಂದನ್ನು ಶಿವನಿಗರ್ಪಿಸಿ

ಮಗದೊಂದನ್ನು ಅವರು ಕನ್ನಡಾಂಬೆಗೆ ಅರ್ಪಿಸಿದರು".

## ಭಕ್ತಿ ಭವನ

ಕನ್ನಡ ನಾಡು ನುಡಿ ಕುರಿತು ಜಯದೇವಿತಾಯಿ ಲಿಗಾಡೆ ಅವರಿಗೆ ಎಲ್ಲಿಲ್ಲದ ಗೌರವಾದರವಿತ್ತು. ಕ್ರಿ.ಶ ಸು. 850ರ ಕನ್ನಡದ ಮೊಟ್ಟಮೊದಲ ಲಾಕ್ಷಣಿಕ ಗ್ರಂಥ ಶ್ರೀವಿಜಯನ 'ಕವಿರಾಜಮಾರ್ಗ' ಕೃತಿಯಲ್ಲಿ "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್" ಎಂದು ಕನ್ನಡ ನಾಡು ಎಲ್ಲಿಂದ ಎಲ್ಲಿಗೆ ಹಬ್ಬಿತ್ತು ಎಂದಿದೆ. ಆದರೆ ಇಂದು ಗೋದಾವರಿ ನದಿ ಇರುವುದು ಮಹಾರಾಷ್ಟ್ರದ ಔರಂಗಬಾದ್‌ನಲ್ಲಿ. ಜಯದೇವಿಲಿಗಾಡೆ ಅವರ ಕಾಲಮಾನದಲ್ಲಿ ಮೈಸೂರ್ ಕರ್ನಾಟಕ, ಮದ್ರಾಸ್ ಕರ್ನಾಟಕ, ಮುಂಬೈ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಪ್ರಾಂತ್ಯಗಳನ್ನೆಲ್ಲಾ ಒಗ್ಗೂಡಿಸುವ ಅಖಂಡ ಕರ್ನಾಟಕಕ್ಕಾಗಿ ಅಹರ್ನಿಶಿ ದುಡಿದರು. ಕನ್ನಡ ನಾಡು–ನುಡಿ ಅಭಿಮಾನದಿಂದ ಸೊಲ್ಲಾಪುರ ಕರ್ನಾಟಕಕ್ಕೆ ಸೇರಬೇಕೆಂಬ ಅದಮ್ಯ ಆಸೆ ಜಯದೇವಿಯವರಿಗಿತ್ತು.

"ಸೊಲ್ಲಾಪುರದೊಳಗೆ ಸೊಲ್ಲಾ ಅಡಗಿಸಬ್ಯಾಡೋ

ನಿಲ್ಲೆಂದು ತಾಯಿ ನುಡಿ ನಿಲ್ಲಿಸು ಸಿದ್ಧರಾಮ

ಅಲ್ಲಗಳೆದವರಿಗೆ ತಿಳಿಹೇಳು" ಎಂದು ಜಯದೇವಿಯವರ ಅವರ ಪ್ರಾರ್ಥನೆ, ಕನ್ನಡ ಅಭಿಮಾನ ಸೊಲ್ಲಾಪುರದಲ್ಲಿ ಇಂದಿಗೂ ಸಾಕ್ಷಿಯಾಗಿ ಜೀವಂತವಾಗಿದೆ. ಪ್ರಸ್ತುತದಲ್ಲಿ ಸೊಲ್ಲಾಪುರ ಮಹಾರಾಷ್ಟ್ರ ರಾಜ್ಯಕ್ಕೆ ಸೇರಿದ್ದರೂ ಪ್ರಸ್ತುತ ಅಲ್ಲಿ ಕನ್ನಡ ಭಾಷೆ, ಜನಸಾಮಾನ್ಯರ ಸಹಜ ಭಾಷೆಯಾಗಿ ಜೀವಂತವಾಗಿದೆ. ಸೋಲ್ಲಾಪುರದಲ್ಲಿನ ಬಡವರು, ಶ್ರೀಮಂತರು, ಸುಶಿಕ್ಷಿತರು, ಅಶಿಕ್ಷಿತರು ಸೇರಿದಂತೆ ಎಲ್ಲಾ ವರ್ಗ, ವರ್ಣದವರಾದಿಯಾಗಿ ಪ್ರತಿಯೊಬ್ಬರೂ ಕನ್ನಡ ಮಾತನಾಡುತ್ತಾರೆ. ಸಮಾರಂಭಗಳೆಲ್ಲವೂ ಕನ್ನಡದಲ್ಲಿಯೇ ನಡೆಯುತ್ತವೆ. ಸೊಲ್ಲಾಪುರದ ದೈನಂದಿನ ಜೀವನವಿಧಾನ ಕನ್ನಡಮಯವಾಗಿದ್ದರೂ ಅಧಿಕೃತವಾಗಿ ಮಹಾರಾಷ್ಟ್ರದಲ್ಲೂಳಿದುಕೊಂಡಿದೆ.

ಸೊಲ್ಲಾಪುರವನ್ನು ಕರ್ನಾಟಕದೊಳಗೆ ಸೇರಿಸುವುದಕ್ಕೊಸ್ಕರ ಕರ್ನಾಟಕ ಏಕೀಕರಣ ಚಳುವಳಿಗೆ ಟೊಂಕಕಟ್ಟಿ ಹೋರಾಡಿದ ವೀರ ಮಹಿಳೆಯಾಗಿದ್ದರು. 1949ರ ಕಲ್ಬುರ್ಗಿಯ; 32ನೇ ಅಖಿಲ ಭಾರತ ಸಮ್ಮೇಳನ, 1950 ಸೊಲ್ಲಾಪುರದಲ್ಲಿ 33ನೇ ಸಾಹಿತ್ಯ ಸಮ್ಮೇಳನ, 1950 ಡಿಸೆಂಬರ್ ಮುಂಬೈನಲ್ಲಿ ನಡೆದ ಈ ಮೂರು ಸಮ್ಮೇಳನಗಳಲ್ಲಿ ಜಯದೇವಿಯವರು ಮಹಿಳಾಗೋಷ್ಠಿ ಅಧ್ಯಕ್ಷತೆಯನ್ನು ವಹಿಸಿದ್ದರು ಆಸ್ಥಾನದಿಂದ ಸ್ವತಂತ್ರ ಭಾರತದ ಸಮಗ್ರ ಕನ್ನಡನಾಡಿನಾದ್ಯಂತ ಸಂಚರಿಸಿ ಏಕೀಕರಣ ಅವಶ್ಯಕತೆಯ ಕುರಿತು ಬಿಡಿಸಿ ಬಿಡಿಸಿ ಒತ್ತಿ ಒತ್ತಿ ತಿಳಿಸುತ್ತಿದ್ದರು. ಕೆಲವೊಮ್ಮೆ ದಕ್ಷಿಣ ಕರ್ನಾಟಕದ ಧುರೀಣರನ್ನು ಕುರಿತು "ಕರುನಾಡ ಅಣ್ಣಂದಿರೆ ನಾನಿಂದು ಗಡಿಭಾಗದಿಂದ ಬಂದಿದ್ದೇನೆ. ನಡುನಾಡಿನ ಅಣ್ಣಂದಿರು ಗಡಿಭಾಗದವರನ್ನು ಕಡೆಗಣ್ಣಿನಿಂದ ನೋಡಬ್ಯಾಡ್ರಿ ನಾವೆಲ್ಲಾ ಒಡಹುಟ್ಟಿದ ಕನ್ನಡ ನಾಡಿನ ಮಕ್ಕಳು. ಅದು ನಡು ನಾಡಿರಲಿ ಒಳನಾಡಿರಲಿ ಹೊರನಾಡಿರಲಿ ಕನ್ನಡಿಗರೆಂದರೆ ಎಲ್ಲಾ ಒಂದೇ. ಆದರೆ ಇಂದಿಗೂ ಉತ್ತರ ಕರ್ನಾಟಕ; ದಕ್ಷಿಣ ಕರ್ನಾಟಕ; ಕಲ್ಯಾಣ ಕರ್ನಾಟಕ ಇತ್ಯಾದಿ ಅನೇಕ ಭೇದಭಾವಗಳು ಸಾಕಷ್ಟಿವೆ ಎಂಬುದನ್ನು ಹೇಳುತ್ತಾರೆ. ಇದನ್ನು ತಮ್ಮ ತ್ರಿಪದಿಯಲ್ಲಿಯೂ

"ಗಡಿಭಾಗದವರಾದರೂ ಕಡಿಮಿಲ್ಲ ಕನ್ನಡಕೆ

ಹುಡಿಯ ತುಂಬುವೆ ಕನ್ನಡ ತಾಯಿಗೆ ಒಡವೆ ಬಿಡಿಸುವೆ ಪದಗಳ" ಎಂದು ರಚಿಸಿದ್ದಾರೆ.

ಮೇ 16 ಮತ್ತು 17, 1935 ಬೇಲೂರಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಯದೇವಿಯವರು ಎರಡನೇ ದಿನದ ಮಹಿಳಾಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ 'ಅಖಂಡ ಕರ್ನಾಟಕ' ಒಂದಾಗಬೇಕೆಂಬ ಆಶಯದ ಧ್ವನಿಯನ್ನು ಪುನರುಚ್ಚರಿಸಿದರು ರಾಜ್ಯ ಪುನರ್ ವಿಂಗಡನೆ ಆದಾಗ ಕೆಲವು ಹೊಸ ಪ್ರದೇಶಗಳು ಸೇರಿ ಮತ್ತೆ ಕೆಲವು ಅಪ್ಪಟ ಕನ್ನಡ ಪ್ರದೇಶಗಳು ಬಿಟ್ಟು ಹೋಗಿ ಕರ್ನಾಟಕ ಹೀಗೆ ಹಿಗ್ಗಿ ಕುಗ್ಗಿ ಚಿದ್ರವಾಗಿತ್ತು. ಕೆಲವು ಪ್ರದೇಶಗಳು ಮಹಾರಾಷ್ಟ್ರಕ್ಕೆ, ಕೆಲವೊಂದಿಷ್ಟು ತಮಿಳುನಾಡಿಗೆ, ಕೆಲವು ಗಡಿ ಪ್ರದೇಶಗಳು ಕೇರಳಕ್ಕೆ ಹಂಚಿಹೋಗಿ ಈಗಲೂ ಅವೆಲ್ಲಾ ಅಲ್ಲೇ ಉಳಿದಿವೆ. ಅವುಗಳನ್ನೆಲ್ಲ ಸೇರಿಸಿದ ಅಖಂಡ ಕನ್ನಡ ನಾಡು ಒಂದಾಗಬೇಕೆಂಬ ಉದ್ದೇಶದಿಂದ ಜಯದೇವಿತಾಯಿ ಅವರು ಮಾತನಾಡಿದರು. ಅಲ್ಲಿದ್ದ ಕೆಂಗಲ್ ಹನುಮಂತಯ್ಯ ಅವರು ಹಿಂದಿನ ದಿನ ಅನೇಕ ಯೋಜನೆ ಹಾಗೂ ಅನುಷ್ಠಾನಗಳ ಬಗ್ಗೆ ಮಾತನಾಡಿದರೆ ವಿನಃ ಗಡಿನಾಡಿನ ಕನ್ನಡದ ಕುರಿತು ಅಖಂಡ ಕರ್ನಾಟಕ ಒಂದಾಗಬೇಕು ಎಂಬ ವಿಷಯಗಳ ಕುರಿತು ಅವರು ಮಾತನಾಡಿರಲಿಲ್ಲ. ಆಗ ಜಯದೇವಿಯವರು ಅತ್ಯಂತ ನೋವಿನಿಂದ "ಕನ್ನಡಿಗರಾದ ಸಹೋದರರು ನಾವೆಲ್ಲ ಒಂದಾಗೋಣವೆಂದರೆ ಭಾರತ ಮತ್ತು ಪಾಕಿಸ್ಥಾನಗಳು ಒಂದಾಗುವುದೆಂದು ತಿಳಿಯುವ ಸ್ವಾರ್ಥಿಗಳಾಗಿದ್ದಾರೆ. ಗತವೈಭವದ ಮುಖ್ಯ ಗುಣಗಳಾದ ಧೈರ್ಯ, ಸಾಹಸ, ಉತ್ಸಾಹಗಳು ನಮ್ಮ ರಕ್ತದಿಂದ ಮರೆಯಾಗಿ ಹೋಗಿವೆ. ನಮ್ಮ ನಾಡಿನವರು, ನಮ್ಮ ಸಂಸ್ಕೃತಿಯವರು ಎಂದು ನಾನು ಗಡಿಭಾಗದ ಸೊಲ್ಲಾಪುರದಿಂದ ಪ್ರವಾಸ ಕೈಗೊಂಡ ನಮ್ಮ ಜನರೆಂದು ಧಾವಿಸಿ ಓಡೋಡಿ ಬಂದೆ. ಮೈಸೂರಿನವರು ಈ ರೀತಿ ನಡೆದುಕೊಂಡರೆ ಹೇಗೆ? ಇಂತಹ ತಾರತಮ್ಯ ನೀತಿ, ಸ್ವಾರ್ಥಭಾವ ಒಳ್ಳೆಯದಲ್ಲ. ತಮಗೆ ಶೋಭೆ ತರುವಂತಹದ್ದಲ್ಲ. 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಎಂದು ಬರಿದೇ ಹಾಡಿದರೇನು ಬಂತು?' ಚೆಲುವ ಕನ್ನಡನಾಡು ಒಂದಾಗಬೇಕು. ನೀವುಗಳದಕ್ಕೆ ಸ್ಪಂದಿಸ್ತಾನೆ ಇಲ್ಲ. ಉತ್ತರ ಕರ್ನಾಟಕ ಆ ಕರ್ನಾಟಕ ಈ ಕರ್ನಾಟಕ ಅಂತ ಬೇರೆ ಬೇರೆ ಮಾಡುತ್ತಿದ್ದೀರಿ. ಅಧಿಕಾರ ಲಾಲಸೆ ಬಿಟ್ಟು ಕರ್ನಾಟಕದ ಅಖಂಡತೆಗಾಗಿ ಒಂದಾಗಿ ಬನ್ನಿ" ಎಂದು ಜಯದೇವಿತಾಯಿ ಕರೆ ನೀಡುತ್ತಾ; ನಡುನಾಡಿನಲ್ಲಿರುವ ಕನ್ನಡಿಗರು ನೀವು ಗಡಿನಾಡಿನಲ್ಲಿರುವ ಕನ್ನಡತಿ ನಾನು, ನಮ್ಮ ಕಷ್ಟ ನಿಮಗೆ ಹೇಗೆ ಗೊತ್ತಾದೀತು ಎಂದು ಪ್ರಶ್ನೆ ಮಾಡುತ್ತಾರೆ. "ಅಣ್ಣಂದಿರೆ ಸೊಲ್ಲಾಪುರದ ಗೊಡವೆ ನಮಗೇಕೆ ಬೇಕಂತ ನೀವುಗಳಿಂದು ಸುಮ್ಮನಿದ್ದರೆ; ಇಂದು ಸೊಲ್ಲಾಪುರಕ್ಕೆ ಒದಗಿರುವ ಸ್ಥಿತಿಗತಿ ನಾಳೆ ಬೇಲೂರಿಗೂ ಒದಗಿತು" ಎಂದು ಅಂದೇ ಧ್ವನಿಯೆತ್ತಿ ಜಯದೇವಿತಾಯಿಯವರು ಆಡಿದ ಮಾತುಗಳು ಅತ್ಯಂತ ರೋಮಾಂಚನಕಾರಿಯಾಗಿದ್ದವು. ಕಲ್ಬುರ್ಗಿಯ 32ನೇ ಸೊಲ್ಲಾಪುರದ 33ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ, 1951ರ ಮುಂಬೈನಲ್ಲಿ 34ನೇ ಸಮ್ಮೇಳನ ಹಾಗೂ 1952ರ ಬೇಲೂರಿನ 35ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳಲ್ಲೇಲ್ಲ ಭಾಗವಹಿಸಿ ಮಾತನಾಡಿದ ಏಕೈಕ ವಿಷಯ ಕರ್ನಾಟಕ ಏಕೀಕರಣ ಕುರಿತದ್ದು. ಬೇಲೂರಿನ 35ನೇ ಸಾಹಿತ್ಯ ಸಮ್ಮೇಳನದಲ್ಲಿ ಮಾತಾನಾಡಿರುವುದನ್ನು ಹಿರೇಮಂಗಳೂರು ಈಶ್ವರನ್ ಕನ್ನಡ ಮಕ್ಕಳ ದೌರ್ಬಲ್ಯವನ್ನು ಕಂಡು ಕನ್ನಡತಾಯಿ ಜಯದೇವಿತಾಯಿಲಿಗಾಡೆಯವರ ರೂಪದಲ್ಲಿ ಬಂದು ಕಣ್ಣೀರಿಟ್ಟರು ಎಂದು ಉಲ್ಲೇಖಿಸುತ್ತಾರೆ.

ನಿಜವಾಗಿ ನಮ್ಮ ಕನ್ನಡ, ಕರ್ನಾಟಕ ಪ್ರಾರಂಭವಾಗುವುದು ನಾಸಿಕದೊಳಗೆ. ಕನ್ನಡಿಗರು ಮೊದಲು ನೆಲೆಸಿದ್ದು ನಾಸಿಕದೊಳಗೆ ಕವಿರಾಜಮಾರ್ಗಕಾರ "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ" ಎಂದು ಹೇಳಿದ್ದರಲ್ಲಿ ನಾವೆಷ್ಟು ಕಳೆದುಕೊಂಡಿದ್ದೇವೆಂಬುದನ್ನು ಯೋಚಿಸಿದರೆ ಜಯದೇವಿತಾಯಿಯವರ ಅಳಲನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಜಯದೇವಿತಾಯಿಯವರು ಅಂದು "ನಾನಂತೂ ಕನ್ನಡಕ್ಕಾಗಿ ಪ್ರಾಣ ಕೊಡಲು ಸಿದ್ಧ. ಗಂಡಸಾದರೆ ನನ್ನ ಬಲಿ ತೊಗೋತಿರೇನು?" ಅಂತ ಅಲ್ಲಿ ನೆರೆದಿದ್ದ ಘಟಾನುಘಟಿಗಳನ್ನು ಕೇಳುತ್ತಾ ಆ ಮೂಲಕವಾದರೂ ಕನ್ನಡಕ್ಕಾಗಿ ಸರ್ವರೂ ತ್ರೀವ್ರಮಟ್ಟದಲ್ಲಿ ಹೋರಾಡಿದರೆ ನನ್ನ ಪ್ರಾಣ ಬೇಕಾದರೂ ಹೋದರೂ ಚಿಂತೆಯಿಲ್ಲ ಎಂಬ ಅವರ ಆ ಮಾತುಗಳು ಅಲ್ಲಿದ್ದವರನ್ನೇಲ್ಲ ಪುಳಕಗೊಳಿಸುತ್ತದೆ. ಪ್ರತಿಯೊಬ್ಬ ಕನ್ನಡಿಗರನ್ನು ಬಡಿದೆಬ್ಬಿಸುವಂತಿರುತ್ತದೆ. ಗಂಡಸಾದರೆ ನನ್ನ ಬಲಿ ತೊಗೋತಿರೇನು? ಎಂದು ಅತ್ಯಂತ ಆರ್ದ್ರತೆಯಿಂದ ಗಳಗಳನೆ ಅತ್ತುಬಿಡುತ್ತಾರೆ. ಅದು ಎಂತಹ ಕನ್ನಡ ಪ್ರೀತಿ, ಎಂತಹ ಕನ್ನಡ ಪ್ರೇಮ ಎಂತಹ ಕನ್ನಡಾಭಿಮಾನ ಎಂಬುದನ್ನು ಅರ್ಥೈಸಿಕೊಳ್ಳಬಹುದು. ಹಾಗೇಯೆ ಕರ್ನಾಟಕ ಏಕೀಕರಣದ ನಂತರ ಕೈಬಿಟ್ಟುಹೋಗಿರುವ ಪ್ರದೇಶಗಳು ಕರ್ನಾಟಕದೊಳಗೆ ಸೇರಿಕೊಳ್ಳಬೇಕಾಗಿರು ಬಾಕೀಕರಣದ ಕುರಿತು ಹೇಳುತ್ತಾರೆ. ಕರ್ನಾಟಕಕ್ಕೆ ಇನ್ನೂ ಸೇರಬೇಕಿರುವ ಅನೇಕ ಪ್ರದೇಶಗಳು ಬಾಕಿ ಉಳಿದಿರುವ ಕುರಿತು ಆಂತರಿಕ ಚಳುವಳಿ ಪ್ರಾರಂಭ ಮಾಡುತ್ತಾರೆ. ಆದರೂ ಇಂದಿಗೂ ಕನ್ನಡ, ಕರ್ನಾಟಕ ಒಂದಾಗಿಲ್ಲದಿರುವ ನೋವು ಜಯದೇವಿತಾಯಿಯವರಲ್ಲಿ ಉಳಿದುಬಿಟ್ಟಿತ್ತು. ಹೀಗೆ ಸದಾ ಕನ್ನಡನಾಡು ಮತ್ತು ಸಂಸ್ಕೃತಿಗೆ ಮಿಡಿಯುತ್ತಿದ್ದ ಅವರ ಮನಸ್ಸು ತಮ್ಮ ಅಂತ್ಯ ಜೀವನವನ್ನಾದರೂ ಕರ್ನಾಟಕ ರಾಜ್ಯದೊಳಗೆ ಕಳೆಯಬೇಕೆಂಬ ಅಭಿಲಾಷೆಯಿಂದ ಮತ್ತು ಅಪ್ಪಟ ಶರಣೆಯಾದ್ದರಿಂದ ಅವರು ನವೆಂಬರ್ ಐದು, 1980ರಂದು ಶರಣರ ನಾಡಾದ ಬೀದರ್‌ನ ಬಸವಕಲ್ಯಾಣಕ್ಕೆ ಬಂದು ನೆಲೆಸಿ ಅಲ್ಲಿ 'ಭಕ್ತಿಭವನ' ಎಂಬ ಮನೆಯನ್ನು ಕಟ್ಟಿಸಿಕೊಂಡು ನಿರಂತರ ನಾಡು–ನುಡಿ ಸಾಹಿತ್ಯ ಕೈಂಕರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಭಕ್ತಿಭವನ ಇಂದಿಗೂ ನೂತನ ಅನುಭವ ಮಂಟಪದ ಐತಿಹಾಸಿಕ 'ತ್ರಿಪುರಾಂತಕ' ಕೆರೆಯ ದಡದ ಮೇಲಿದೆ. ಪ್ರಸ್ತುದಲ್ಲೀಗ ಅನುಭವಮಂಟಪದವರು ಭಕ್ತಿಭವನವನ್ನು ಸೇರಿಸಿಕೊಂಡಿದ್ದಾರೆ. ಈಗಲ್ಲಿ ಜಯದೇವಿಯವರ ಸ್ಮಾರಕವಿದೆ. ಬೀದರ್‌ನ ಬಸವಕಲ್ಯಾಣದಲ್ಲಿ ಮನೆ ಕಟ್ಟಿಸಿಕೊಂಡು 1980 ರಿಂದ 1986ರವರೆಗೆ ಒಟ್ಟು ಆರು ವರ್ಷವಿದ್ದು 1986ರಲ್ಲಿ ಜಯದೇವಿತಾಯಿವರು ಲಿಂಗೈಕ್ಯರಾಗುತ್ತಾರೆ. ಅವರ ಅಂತಿಮ ಶವಯಾತ್ರೆಯಲ್ಲಿ ಭಾಗವಹಿಸಿದವರಲ್ಲಿ ಅನೇಕರು ಜಯದೇವಿತಾಯಿಯವರು ನಿಜಶರಣೆಯಾದ್ದರಿಂದ ಶರಣರಿಗೆ ಆ ಮಣ್ಣು ಪಾವನವಾದ್ದರಿಂದ ಜಳಕ ಮಾಡಬಾರದೆಂದು ಹಾಗೆ ಊಟ ಮಾಡಿ ಮಲಗಿದೆವು ಎನ್ನುವವರಿದ್ದಾರೆ. ಇಂತಹ ಮಹಾಶರಣೆ, ಅನನ್ಯ ಕನ್ನಡ ಹೋರಾಟಗಾರ್ತಿಯ ಸ್ಮಾರಕವಿಂದು ಅನಾಥವಾಗಿದೆ. ಅದನ್ನು ಸರ್ಕಾರ ಜೀರ್ಣೋದ್ಧಾರ ಮಾಡಿ ಜನಸಾಮಾನ್ಯರಿಗೆ ಅವರ ಕ್ರಾಂತಿಯ ಬದುಕು ಮತ್ತು ವಿಚಾರಗಳು ತಿಳಿಯುವಂತೆ ಮಾಡಬೇಕಾಗಿದೆ. ಇವಿಷ್ಟು ಜಯದೇವಿಯವರ ಜೀವನ ಸಾಧನೆಗಳಾದರೆ ಇನ್ನೂ ಅವರ ಸಾಹಿತ್ಯಿಕ ಸಾಧನೆ, ಸಾಮಾಜಿಕ ಸಾಧನೆ, ಶೈಕ್ಷಣಿಕ ಸಾಧನೆ, ಧಾರ್ಮಿಕ ಕ್ಷೇತ್ರವು ಸೇರಿದಂತೆ ಅನೇಕ ಸಾಧನೆಗಳನ್ನು ಅದ್ಭುತವಾಗಿ ಮಾಡಿದ್ದಾರೆ.

ಸಾಹಿತ್ಯಿಕವಾಗಿ ಜಯದೇವಿಯವರು ಮರಾಠಿ ಮತ್ತು ಕನ್ನಡ ಭಾಷೆ ಕಲಿತ ದುಭಾಷಿಯಾಗಿದ್ದರು. ಆ ಕಾಲದಲ್ಲೇ 7ನೇ ತರಗತಿಯವರೆಗೆ ಮರಾಠಿ ಶಿಕ್ಷಣ ಪಡೆದ ಅವರು ಸ್ವತಃ ತಾವೇ 'ಮನೆ' ಎನ್ನುವ ವಿಶ್ವವಿದ್ಯಾಲಯದಲ್ಲಿ ಸ್ವಂತ ಆಸಕ್ತಿಯಿಂದ ಕನ್ನಡ ಕಲಿತು; ಕನ್ನಡ ಸಾಹಿತ್ಯ ಅದರಲ್ಲೂ ವಚನ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ ಸಾಹಿತ್ಯ ರಚನೆ ಮಾಡಿದ್ದಾರೆ. ಬಾಲ್ಯದಿಂದಲೂ ವಚನಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ ಜಯದೇವಿಯವರಿಗೆ ವಚನಗಳೆಂದರೆ ಪಂಚಪ್ರಾಣ. ಮಹಾ ಅನುಭಾವಿ ಕವಯಿತ್ರಿಯಾದ ಜಯದೇವಿಯವರು "1952–ಜಯಗೀತೆ, 1950–ತಾಯಿಯ ಪದಗಳು, 1965–ಶ್ರೀಸಿದ್ಧರಾಮ ಪುರಾಣ, 1968–ತಾರಕ್ಕ ತಂಬೂರಿ, ಬಂದೇವು ಕಲ್ಯಾಣಕೆ, ಸಾವಿರದ ಪದಗಳು, ಅರುವಿನಾಗರದಲ್ಲಿ ಎಂಬ ಕನ್ನಡ ಕೃತಿಗಳನ್ನು ಸಿದ್ಧವಾಣಿ, ಬಸವದರ್ಶನ, ಸಮೃದ್ಧ ಕರ್ನಾಟಕಾಂಬೆ ರೂಪರೇಷೆ, ಮಹಾಯೋಗಿನಿ, ಸಿದ್ಧರಾಮಾಂ ಚಿ ತ್ರಿವಧಿ, ಬಸವ ವಚನಾಮೃತ, ಶೂನ್ಯ ಸಂಪಾದನೆ ಎಂಬ ಮರಾಠಿ ಕೃತಿಗಳನ್ನೂ ರಚಿಸಿದ್ದಾರೆ.

ಜಯಗೀತೆ 40 ಸುಂದರ ಸುಮಧುರ ಗೀತೆಗಳ ಗೊಂಚಲು. 'ಮಂಗಳದ ಮಹಿಮೆ' ಎಂಬ ಕವಿತೆಯಲ್ಲಿ "ಮನದ ಮದವೆಲ್ಲ

ಮುರಿದು ತಾ ಎಲ್ಲ ಪೃಥಿವಿಯಲ್ಲಿ ಅಣುವಿನೊಳು ಒಂದು ಅಣುವು

ಗೂಡಿ ತಿರುಗುತಿದೆ ಶಕ್ತಿರೂಪ

ಅಣು ಅಣುವಿನೊಡಗೂಡಿ ಒಂದಾಗಿ ಹೊಸೆದ ಮಹತ್ತು ಭಕ್ತಿಯಾಗಿ ಪರಿಣಮಿಸುವಂತೆ ಅವರ ಭಾವ ಭಕ್ತಿಮಯವಾಗಿದೆ ಎನ್ನುತ್ತಾರೆ.

ತಾರಕ್ಕ ತಂಬೂರಿಯ, ನಾನನದಕೆ ನುಡಿಸುವೆ. ತಾರ ತಂಬೂರಿಯ

ಗುರುವಿನ ಅಗಣಿತ ಮಹಿಮೆಯ ಸಾರುವೆ. ತಾರ ತಂಬೂರಿಯ

ಎಂದು ಹಾಡಿದ ಜಯದೇವಿಯವರು 'ತಾರಕ ತಂಬೂರಿ' ಕೃತಿಯನ್ನು 'ಜಯಸಿದ್ಧರಾಮಾ' ಅಂಕಿತದಲ್ಲಿ ರಚಿಸಿ ಪಲ್ಲವಿಸಿದ ಅನುಭವಜನ್ಯ ಕವನಗಳ ಭಾವತೀವ್ರತೆಯ ಸಂಕಲನವಾಗಿದೆ.

ನಿತ್ಯದಾಸೋಹದಿ ಮನೆಯ ತೊತ್ತು ಕೆಲಸದಿ ಮನವ

ಅತ್ತಿತ್ತ ಸುಳಿಯದಂತೆ ಸಲವು ಸಿದ್ಧರಾಮ.

ಕುಲಭೇದವ ಬಿಡಿಸಿ ಛಲ ಸತ್ಯಾಚಾರವ ಹಿಡಿಸಿ

ಶೀಲದ ಮರ್ಮವ ತಿಳಿಸಿ ಸಲವು ಸಿದ್ಧರಾಮ. ಎಂಬಲ್ಲಿ ತಾಯಿಯವರ ಅಂತರಾಳದ ಆರ್ತಭಕ್ತಿಯ ಪರಾಕಾಷ್ಠೆಯನ್ನು ಕಾಣಬಹುದಾಗಿದೆ.

1986ರಲ್ಲಿ 'ಸಾವಿರದ ಪದಗಳು' ಸಂಕಲನದ ರೂಪದಲ್ಲಿ ಪ್ರಕಟಗೊಂಡಿದೆ. ತಾಯಿಯವರು ರಚಿಸಿದ ನಾಲ್ಕು ಸಾವಿರ ಪದ್ಯಗಳಲ್ಲಿ ಸಾವಿರ ಪದ್ಯಗಳನ್ನು ಆಯ್ಕೆ ಮಾಡಿಕೊಂಡು ಈ ಸಂಕಲವನ್ನು ರೂಪಿಸಲಾಗಿದೆ. ಇಲ್ಲಿ ದೈವದ ಕುರಿತಾಗಿ ಭಕ್ತಿಗೀತೆಗಳು, ಶಿವಶರಣ–ಶರಣೆಯರ ಕುರಿತು ಭಾವಗೌರವ ನುಡಿಗಳು ಮತ್ತು ಶ್ರೇಷ್ಠ ಜೀವಿಗಳ ಪುಣ್ಯಸ್ಮರಣೆಗಳು ಹೀಗೆ ಮೂರುವಿಧದಲ್ಲಿ ಇದು ಮುಪ್ಪುರಿಗೊಂಡಿದೆ. ಶಿವಶರಣ–ಶರಣೆಯರ ಬಗ್ಗೆ ಹೇಳುವಾಗ ಬಸವಣ್ಣನವರಿಗೆ ಯಾವಾಗಲೂ ತಾಯಿಯವರು ಪ್ರಥಮ ಸ್ಥಾನ ನೀಡಿದ್ದಾರೆ.

ಬಸವ ತುಳಿದ ದಾರಿ

ವಸುಧೀಗೆ ಉಪಕಾರಿ

ದೆಸೆದಿಕ್ಕುಗಳಲ್ಲಿ ಕೀರುತಿ ಹರಡಿತ್ತು

ಶಶಿಧರನ ಹೊತ್ತ ಬಸವಣ್ಣ ಎಂದು ಮನದುಂಬಿ ಬಸವಣ್ಣನನ್ನು ಜಯದೇವಿಯತಾಯಿ ಕೊಂಡಾಡುತ್ತಾರೆ.

"ಆಚಾರ–ವಿಚಾರ, ಎಚ್ಚಾರ ಎಂಬುವ ಅಚ್ಚ ನೀಚ್ಚಳದ ತಿಳಿದಳದ ಪುತ್ತೂರಿ ಮುಚ್ಚಿ ತಂದೇನು ಮಾಡಿ" ಇಂದು ವರಮಹಾರಾಜ್ಯದ ದೈವ ಸಿದ್ಧರಾಮನಿಗೆ ವಿನಂತಿಸುತ್ತಾರೆ. ಭಾವದ ಬಳ್ಳಿಗೆ ದೇವನ ಹೂಗಳು ಶಿವ ಸಿದ್ಧರಾಮನ ಪುರಾಣ ಕಾಯಾಗಿ ಭಾವ ಬಯಲೊಳು ಬದಲಿಸಿದೆ ಅಂತ ಹೇಳುತ್ತಾರೆ.

ತಾಯಿಯ ಪದಗಳು, ರಾಯಸಿದ್ಧನ ಕಾವ್ಯ

ಹಾಯಾಗಿ ನಿನ್ನ ಧಾಟಿ ನಡೆಸಿದೆ, ಸರ್ವಜ್ಞ

ನಿನ್ನ ಛಾಯೆ ಇರಲಿ ಕಡೆತನಕ.

'ತಾಯಿಯ ಪದಗಳು' ತಾಯ್ತನದ ಹಿರಿಮೆಯಿಂದ ಕೂಡಿದ ಈ ಪದಗಳು ಮಾನವ ಕುಲಕ್ಕೆ ನೀಡಿದ ಸಂಹಿತೆಗಳು. 'ತಾಯಿಯ ಪದಗಳು' ರಚನೆಯ ಸಾರಸಂಗ್ರಹವನ್ನೇ ಡಾ. ಚೆನ್ನಾಂಬಿಕ ಪಾವಟೆಯವರ ಮಾತುಗಳು ಹೀಗೆ ತಿಳಿಸುತ್ತವೆ:

ವರವಾದ ಪರಸಾದ ಕರೆದು ನಾ ನೀಡುವೆ

ವರಭಕ್ತೀಲಿ ನೀವು ಉಣಬೇಕು. ಅದು ನಿಮಗ

ಪರತರ ಸುಖವ ಕೊಟ್ಟೀತ.

'ಶ್ರೀಸಿದ್ಧರಾಮ ಪುರಾಣ'ದಲ್ಲಿ ತಾಯಿಯವರು

"ಎಲ್ಲ ಬಲ್ಲವಳೆಂಬ ಇಲ್ಲವದು ಭ್ರಮೆ ಎನಗೆ

ಬಲ್ಲವರ ಪಾದ ಹಿಡಿಯುವೆ – ಬಲ್ಲಿದರು

ಕಲಿಸಿರಿ ಮತ್ತೆ ನುಡಿಸಿರಿ". ಎಂದು ತಮ್ಮ ವಿನೀತಭಾವವನ್ನೇ ಮೆರೆದಿದ್ದರೂ 'ಶ್ರೀಸಿದ್ಧರಾಮ ಪುರಾಣ'ವು ಕನ್ನಡದ ಅಪರೂಪ ಕೃತಿಗಳಲ್ಲಿ ಒಂದು ಎಂಬುವಲ್ಲಿ ಅನುಮಾನವಿಲ್ಲ. ಆಧುನಿಕ ಪಂಚ ಮಹಾಕಾವ್ಯಗಳೆಂದರೆ ಕುವೆಂಪುರವರ 'ಶ್ರೀರಾಮಾಯಣ ದರ್ಶಣಂ', ಪುತಿನ ಅವರ 'ಶ್ರೀಹರಿಚರಿತೆ', ವಿನಾಯಕ ಕೃಷ್ಣಗೋಕಾಕ್ ಅವರ 'ಭಾರತ ಸಿಂಧು ರಶ್ಮಿ', ಸಂ.ಶಿ. ಭೂಸನೂರಮಠ ಅವರ 'ಭವ್ಯ ಮಾನವ' ಹಾಗೆಯೇ ಡಾ. ಜಯದೇವಿತಾಯಿ ಲಿಗಾಡೆ ಅವರ 'ಶ್ರೀಸಿದ್ಧರಾಮ ಪುರಾಣ'. ಹೀಗೆ ಆಧುನಿಕ ಪಂಚ ಮಹಾಕಾವ್ಯಗಳಲ್ಲಿ ಒಂದು ಎಂಬ ಹೆಗ್ಗಳಿಕೆ ಮಾತ್ರ ಪಾತ್ರವಾಗಿಲ್ಲದೆ ಮಹಿಳಾ ವಿರಚಿತ ಆಧುನಿಕ ಮೊದಲ ಮಹಿಳಾ ವಿರಚಿತ ಮಹಾಕಾವ್ಯ ಎನ್ನಬಹುದು. ಶ್ರೀಸಿದ್ಧರಾಮ ಪುರಾಣ ಅಚ್ಚಗನ್ನಡ ದೇಸಿ ಛಂದೋ ಪ್ರಕಾರದ ನಾಲ್ಕು ಸಾವಿರದ ನೂರು ತ್ರಿಪದಿಗಳುಳ್ಳ ಕೃತಿಯಲ್ಲಿ ಅವರ ಪರಮ ಆರಾಧ್ಯ ದೇವರಾದ ಶ್ರೀಸಿದ್ಧರಾಮನನ್ನು ಸ್ತುತಿಸಿರುವುದು ಮತ್ತು ಬೇರೆ ಬೇರೆ ಕೃತಿಗಳಲ್ಲಿ ಹನ್ನೆರಡು ಸಾವಿರ ತ್ರಿಪದಿಗಳು ಸೇರಿ ಒಟ್ಟು ಇಪ್ಪತ್ತೈದು ಸಾವಿರ ತ್ರಿಪದಿಗಳನ್ನು ರಚಿಸಿದ ಜಯದೇವಿಯವರು ಅಚ್ಚಕನ್ನಡ ತ್ರಿಪದಿಯನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿದ್ದಾರೆ.

ಡಾ. ಜಯದೇವಿತಾಯಿ ಲಿಗಾಡೆ ಅವರು ಸುಮಾರು ಒಂಬತ್ತನೇ ವಯಸ್ಸಿಗೆ ಪ್ರಾರಂಭಿಸಿ ತ್ರಿಪದಿ ಮೂಲಕ ಶರಣರ ವೈಚಾರಿಕ ವಿಚಾರಗಳನ್ನು ಪ್ರಚುರಪಡಿಸಲು ಬಳಸಿದ್ದಾರೆ. ಅದರ ಸ್ಪಷ್ಟ ವಿವರಣೆ ನಿಡುತ್ತಾ;

"ಪಂಡಿತರ ಮೆಚ್ಚಿಸಲು ಖಂಡಿತ ಬರೆದಿಲ್ಲ

ಮಂಡಿಸಲು ವಾದ ಬಂದಿಲ್ಲ

ಮೂಡಿಹವು ಚಂಡ ಸಿದ್ದೇಶನ ಒಲವಿಂದ" ಎಂದು ಜನಸಾಮಾನ್ಯರಿಗಾಗಿ ಬರೆದಿದ್ದೇನೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅವರ ರಚನೆಗಳಲ್ಲನೇಕ ಅಪ್ರಕಟಿತವಾಗಿಯೇ ಉಳಿದವು. ಕನ್ನಡ ನಾಡು–ನುಡಿಗಾಗಿ ಸರ್ವವನ್ನು ಸಮರ್ಪಿಸಿದ ಅವರ ಪ್ರಕಟಿತ ಬರಹಗಳನ್ನೇಲ್ಲಾ ಸೇರಿಸಿ ಸಮಗ್ರ ಸಾಹಿತ್ಯ ಸಂಪುಟ ಹೊರತರಲು ಎಂ.ಎಂ. ಕಲ್ಬುರ್ಗಿಯವರು ಪ್ರಯತ್ನಮಾಡಿದರಾದರೂ ಅಷ್ಟರೊಳಗಾಗಲೇ ಅವರ ಹತ್ಯೆಯಾಯಿತು.

## ಡಾ. ಜಯದೇವಿತಾಯಿ ಲಿಗಾಡೆ ಅವರ ಸಾಮಾಜಿಕ ಕಾರ್ಯಗಳು

ಬಸವ ಮತ್ತು ಗಾಂಧೀತತ್ವಗಳ ಅನುಸರಣೆಗಾಗಿ ಅಸ್ಪೃಶ್ಯರ ಸೇವೆಯನ್ನು ತಾಯಿ ಮನಃಪೂರ್ವಕವಾಗಿ ಮಾಡಿದ್ದಾರೆ. ಸೊಲ್ಲಾಪುರ ಮತ್ತು ಬಾರ್ಶಿಗಳಲ್ಲಿದ್ದ ರಿಮ್ಯಾಂಡ್ ಹೋಂ, ಹರಿಜನಸಂಘ, ಗಾಂಧೀ ವಸ್ತ್ರಾಲಯಗಳಿಗೆ ಜಯದೇವಿತಾಯಿ ಲಿಗಾಡೆ ಅವರ ಪ್ರೇರಣೆ–ಬೆಂಬಲಗಳು ಮುಖ್ಯವಾಗಿದ್ದವು. ಯಾವ ಊರಿಗೇ ಹೋಗಲಿ ಹರಿಜನ ಕೇರಿಯನ್ನು ಭೇಟಿ ಮಾಡಿ ಬರುತ್ತಿದ್ದರು. ಅಸ್ಪೃಶ್ಯತೆ ನಿವಾರಣೆಗಾಗಿ 'ಶರಣ ಸಮಾಜ' ಎಂಬ ಸಂಘವನ್ನು ಸ್ಥಾಪಿಸಿದರು. ಅಂತರ್ಜಾತೀಯ ವಿವಾಹಗಳನ್ನು ಪ್ರೋತ್ಸಾಹಿಸಿದರು.

ಜಹಿರಾಬಾದ್ ಪ್ರಾಂತೀಯ ಸಭೆಗೆ ಹೈದರಾಬಾದ್ ನಿಜಾಮ ಜಯದೇವಿತಾಯಿಲಿಗಾಡೆಯವರಿಗೆ ನಿರ್ಬಂಧ ನಿಷೇಧಾಜ್ಞೆಯನ್ನು ಹೊರಡಿಸಿದಾಗ ಅದನ್ನು ಮೀರಿದ ದಿಟ್ಟತನದ ಉದಾಹರಣಾ ತ್ರಿಪದಿ "ಕಲ್ಯಾಣದ ಭೂಮಿಯ ಸೀಮೆಯೊಳಗೆ ನಾ ಕಾಲಿಡಕೂಡದೆಂದು ಕಾಯಿದೆ ತೆಗೆದಿದಾನೆ ನಿಜಾಮ ಆಲಿಸದೆ ಸೀಮೆಯ ದಾಟಿದೆ" ಎಂದಿದೆ.

ರಜಾಕಾರರ ದೌರ್ಜನ್ಯದ ದಿನಗಳಲ್ಲಿ ನಿರಾಶ್ರಿತರಿಗಾಗಿ ಅವರು ತಮ್ಮ ನಲವತ್ತು ಎಕರೆಯ ಹೊಲದಲ್ಲಿ ಬೆಳೆದು ಫಸಲಿಗೆ ಬಂದಿದ್ದ ಬೆಳೆಯನ್ನು ತೆಗೆಸಿ ಅಲ್ಲಿ ನಿರಾಶ್ರಿತರಿಗೆಲ್ಲಾ ಶಿಬಿರಗಳನ್ನು ಹಾಕಿಕೊಟ್ಟರು. ಮಕ್ಕಳ ವಿದ್ಯಾಭ್ಯಾಸಕ್ಕೆಂದು ಶಾಲೆ ಪ್ರಾರಂಭಿಸಿದರು. ಡಾಕ್ಟರ್ ಮೋದಿ ಮತ್ತವರು ತಂಡವನ್ನು ಕರೆಸಿ ಸುಮಾರು ಮೂರು ಸಾವಿರ ಜನರಿಗೆ ಕಣ್ಣಿನ ಸಾಮೂಹಿಕ ಶಸ್ತ್ರಚಿಕಿತ್ಸೆ ಮಾಡಿಸಿದ ಸಂದರ್ಭದಲ್ಲಿ ರೋಗಿಗಳ ಮತ್ತು ಅವರ ಸಹಾಯಕರಿಗಾಗಿ ಊಟ–ವಸತಿ, ಖರ್ಚು ವೆಚ್ಚ ಇತ್ಯಾದಿ ಸಕಲ ವ್ಯವಸ್ಥೆಗಳನ್ನೂ ತಾವೇ ಮಾಡಿಸಿದ್ದರು. ಹಾಗಾಗಿ ಸುಪ್ರಸಿದ್ಧ ಡಾಕ್ಟರ್ ಮೋದಿಯವರು ಜಯದೇವಿತಾಯಿಲಿಗಾಡೆಯವರನ್ನು 'ಧನ್ವಂತರಿ ದೇವಿ' ಎಂದು ಕರೆಯುತ್ತಿದ್ದರು.

ಹೈದರಾಬಾದ್ ಕರ್ನಾಟಕದ ನಿಜಾಮನ ಕಿರುಕುಳಗಳಿಗೆ ನೊಂದು–ಬೆಂದ ಗುಲ್ಬರ್ಗಾ ರಾಯಚೂರು ಬೀದರ್ ಭಾಗದ ಜನರಿಗೆ ಜಯದೇವಿಯವರು ನಲವತ್ತು ಎಕರೆಗಳಲ್ಲಿ ಬೆಳೆದುನಿಂತ ಬೆಳೆಯನ್ನು ತೆಗೆಸಿ ಸುಮಾರು ಮೂರು ಸಾವಿರ ಜನರಿಗೆ ಆಶ್ರಯ ನೀಡಿದ್ದನ್ನು ಉರ್ದು ಕವಿ ಚಂದ್ರಿಕೆ ಅವರು ರಚಿಸಿರುವ ಕವನವನ್ನು ಜಯದೇವಿಯವರ ಅಳಿಯ ಶಂಕರ್ ಮೂಗಿ ಅವರು ಕನ್ನಡಕ್ಕೆ ಅನುವಾದ ಮಾಡಿರುವ ಪದ್ಯವಿದು.

ಅಟ್ಟ ಓಡಿಸಿದ ಕಾಸಿಮ ಕಟ್ಕೊಂಡು ರಜಾಕಾರರ ದಂಡು

ಕೂಡಿ ಬಂದೆವು ನಾವಂದು ತೋಳ ಕಂಡ ಕುರಿಯ ಹಿಂಡು

ಉಟ್ಟಿದ್ದ ಸೀರೆ ತೊಟ್ಟಿದ್ದೆವಲ್ಲಿ ಬೆನ್ನು ಬಿರಿವ ಬಿಸಿಲಿನಲ್ಲಿ

ಸೊನ್ನಲಿಗೆ ಭೂಮಿಗೆ ಬಂದು ನಿಂತೆವು ಸಿದ್ಧನ ಛತ್ರದಲ್ಲಿ.

ಓಡಿಬಂದವರ ತಾಯಿ ಬಂದು ನೋಡಿದೆ ಹೊಟ್ಟೆ ಬಟ್ಟೆ

ತಂದು ಸುರಿದಿರಿ ಕಾಳು–ಕಡಿ ಧಾನ್ಯ ಮೂಟೆ ಮೂಟೆ

ಹೊಲದಲ್ಲಿ ಮನೆಕಟ್ಟಿ ಕೊಟ್ಟಿರಿ.

ಕೂಯ್ಸಿದಿರಿ ಬೆಳೆದುನಿಂತ ಫಸಲು

ಆ ವರ್ಷ ನಿಮಗಾಗಲಿಲ್ಲ ಬೆಳೆಯಲ್ಲೇನು ಅಸಲು.

ಕೂಸು ಕಂಡಿರಲಿಲ್ಲ ನೆತ್ತಿಗೆಣ್ಣೆ.

ಹೊಟ್ಟೆಗಿರಲಿಲ್ಲ ಹಾಲು ತೊಟ್ಟು ಬದುಕುವಾಸೆ ಮಂದಿಗಿರಲಿಲ್ಲ.

ತಂದು ಹೊದಿಸಿದಿರಿ ಚಾದರದ ಕಟ್ಟು

ಹಡೆವ ನಾರಿಯರ ಕರೆತಂದು ಮಾಡಿದಿರಿ ಹಾರೈಕೆ

ತವರಿಗೆ ಕಡಿಮೆಯಾಗದಂತೆ

ಪಡೆದೇವು ಅಮ್ಮ ನಿಮ್ಮ ಹರಕೆ ಹೇಗೆ ತೀರಿಸಬೇಕು ತಾಯಿ ನಿಮ್ಮ ಋಣವ

ನೆನೆದೇವು ಹಡೆದ ಮಕ್ಕಳಿಗೆ ನಿಮ್ಮ ಹೆಸರಿಟ್ಟು

ನೀವು ಸಿದ್ಧರಾಮನ ಮಗಳು ಎಂಬುದೇ ನಮಗೆ ಸುದ್ದಿ

ಇಲ್ಲದಿರೆ ಹೇಗೆ ಬಂದೀತು ಇಂಥ ಕರುಳಿನ ಬುದ್ದಿ.

ಸಿದ್ದರಾಮನ ಜೀವದಯೆ ವ್ಯಕ್ತಿತ್ವ ಪಡೆದ ನೀವು

"ಹೆಣ್ಣು ಹೆಣ್ಣಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನ"

ಎಂಬಂತೆ ನೀವು ನಮ್ಮ ಸೇವೆಯನ್ನು ಮಾಡಿದ್ದೀರಿ. ನಮ್ಮನ್ನ ಕಾಪಾಡಿದ್ದೀರಿ. ಎಂದು ಉರ್ದುಭಾಷೆಯಲ್ಲಿ ಕವಿತೆ ಮೂಲಕ ಸ್ಮರಿಸಿರುವುದನ್ನು ಜಯದೇವಿತಾಯಿಯವರ ಅಳಿಯ ಅಭಿಮಾನದಿಂದ ಅನುವಾದಿಸಿದ್ದಾರೆ.

ಸೊಲ್ಲಾಪುರದಲ್ಲೊಮ್ಮೆ ಕಾಲರಾ ರೋಗ ವ್ಯಾಪಿಸಿದಾಗ ಡಾ. ಜಯದೇವಿತಾಯಿಲಿಗಾಡೆಯವರು ಅಲ್ಲಲ್ಲಿ ನಾಗರಿಕರ ಸಭೆ ಕರೆದು ಭಾಷಣಗಳ ಮೂಲಕ ಜನರಲ್ಲಿ ಧೈರ್ಯತುಂಬಿದರಲ್ಲದೆ ಅಗತ್ಯಸೇವೆಗಳನ್ನು ಒದಗಿಸಿದರು. ಗಾಂಧೀಜಿಯವರ ತತ್ವಗಳಿಗೆ ಮಾರುಹೋಗಿ ನೂಲುವ ಮತ್ತು ಸ್ವದೇಶಿ ಬಟ್ಟೆಯನ್ನು ತೊಡುವ ವ್ರತತೊಟ್ಟು ತಮ್ಮ ಜ್ಞಾನಮಂದಿರದಲ್ಲೂ ಅದನ್ನು ಕಾರ್ಯರೂಪಕ್ಕೆ ತಂದರು. ಹಿಂದೂ ಮುಸಲ್ಮಾನ ಬಂಧುಗಳನ್ನೆಲ್ಲಾ ಒಂದೇ ರೀತಿಯಲ್ಲಿ ಸಾಮರಸ್ಯದಿಂದ ಕಾಣುತ್ತಾ ಹೃದಯವಂತಿಗೆ ಮೆರೆದಿದ್ದರು.

ಸ್ವಾತಂತ್ರ್ಯ ಬಂದ ಸಮಯದಲ್ಲಿ ಎಲ್ಲಾ ಮಹಿಳಾ ಸಂಘಟಕರನ್ನು ಕರೆದು ಸಿದ್ಧರಾಮನಹುಂಡಿ ಎಂಬ ಸ್ಥಳದಲ್ಲಿ ಧ್ವಜಾರೋಹಣ ಮಾಡಿಸಿದ್ದಲ್ಲದೆ ಅಂದು ರಂಜಾನ್ ಹಬ್ಬವಾದ್ದರಿಂದ ಮುಸ್ಲಿಂರನ್ನು ಸಹ ಊಟಕ್ಕೆ ಕರೆದು ಹಿಂದು–ಮುಸ್ಲಿಂ ಎಂಬ ತಾರತಮ್ಯವಿಲ್ಲದೆ ಅನ್ನಸಂತರ್ಪಣೆ ಮಾಡಿ ಭಾವೈಕ್ಯತೆಯನ್ನು ಮೆರೆದವರು ಜಯದೇವಿತಾಯಿ ಲಿಗಾಡೆಯವರು.

ಮಹಾತ್ಮ ಗಾಂಧಿಜಿಯವರ ಹತ್ಯೆ ಜಯದೇವಿಯವರಿಗೆ ಅತೀವ ನೋವನ್ನುಂಟುಮಾಡಿತ್ತು. ಆ ಕುರಿತು

"ನಿನ್ನ ಮರಣ ನನ್ನ ಹರಣ ಕದವಿ ಶರಣೆಯಾಗಲಿ

ನಿನ್ನ ಬಾಳು ನಿನ್ನ ಬಯಕೆ ನನ್ನ ಹರಕೆಯಾಗಲಿ" ಎಂದು ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾರೆ. ಅಲ್ಲದೆ ವಾರಪೂರ್ತಿ ಸೊಲ್ಲಾಪುರದ ಪ್ರಮುಖ ಸ್ಥಳಗಳಲ್ಲಿ ಶೋಕಸಭೆಗಳನ್ನು ನಡೆಸುತ್ತಾರೆ.

ಬುದ್ಧ–ಬಸವ–ಗಾಂಧಿ ಎಲ್ಲರೂ ಒಂದೆ. ಬುದ್ಧ ಬಸವನಾಗಿ ಬಸವ ಗಾಂಧಿಯಾಗಿ ಆಗಾಗ ಲೋಕದ ಆಚ್ಯಾರ ತಿದ್ಯಾರಾ ಶುದ್ಧ ಬೀಜವ ಬಿತ್ಯಾರಾ! ಎಂದು ರಚಿಸಿದ್ದಾರೆ.

## ಮಹಿಳಾ ಕ್ಷೇತ್ರಕ್ಕೆ ಡಾ. ಜಯದೇವಿತಾಯಿಲಿಗಾಡೆಯವರ ಕೊಡುಗೆ

ಸ್ತ್ರೀ ಶಿಕ್ಷಣದ ಕುರಿತು ಡಾ. ಜಯದೇವಿತಾಯಿಲಿಗಾಡೆಯವರು ಅಪಾರ ಕಳಕಳಿ ಕಾಳಜಿ ಹೊಂದಿದ್ದರು. "ಸುವ್ಯವಸ್ಥಿತ ಸಮಾಜ ರಚನೆಗೆ ಸುಸಂಸ್ಕೃತ ಜನಾಂಗಬೇಕು. 'ಸುಸಂಸ್ಕೃತಿ' ಎಂಬುದು 'ಸ್ತ್ರೀ' ಶಿಕ್ಷಣದ ತವರು ಮನೆ. ಸುಖ–ಶಾಂತಿ ನೆಲೆಸುವಂತೆ ಮಾಡುವುದು ಧರ್ಮದ ಗುರಿ. ದುಃಖಕ್ಕೆ ಅಜ್ಞಾನ, ಬಡತನ ವರ್ಗಕಲಹ ಕಾರಣವಾಗಿವೆ. ಇವೆಲ್ಲಾ ಇಲ್ಲದಂತೆ ಸಮಾಜ ರಚನೆಯಾಗಲು ಶಿಕ್ಷಣ ಅತಿಮುಖ್ಯ" ಎಂದು ಡಾ. ಜಯದೇವಿತಾಯಿಲಿಗಾಡೆಯವರು ಸದಾ ತಮ್ಮ ಭಾಷಣಗಳಲ್ಲಿ ಪ್ರಸ್ತಾಪಿಸುತ್ತಾ 'ಸ್ತ್ರೀ' ಶಿಕ್ಷಣ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪ್ರೇರಣೆ, ಪ್ರಚೋದನೆ ಮತ್ತು ಅರಿವನ್ನುಂಟುಮಾಡುತ್ತಿದ್ದರು.

'ಮಹಿಳಾ ಜ್ಞಾನಮಂದಿರದಲ್ಲಿ ಕನ್ಯಾಶಾಲೆಯನ್ನು ಸ್ಥಾಪಿಸಿ ಅಲ್ಲಿ ಮರಾಠಿಯೊಂದಿಗೆ ಕನ್ನಡ ಕಲಿಯಲು ವ್ಯವಸ್ಥೆ ಮಾಡಿದರು. ವಿದ್ಯಾರ್ಥಿನಿಯರನ್ನು ಪ್ರಗತಿಪಥದತ್ತ ಕೊಂಡೊಯ್ಯಲು ಶಾಲಾ–ಕಾಲೇಜುಗಳಲ್ಲಿ ನಗದು ಬಹುಮಾನ ಹಾಗೂ ಪರ್ಯಾಯ ಫಲಕಗಳನ್ನು ನೀಡುವ ಮೂಲಕ ಹೆಣ್ಣುಮಕ್ಕಳನ್ನು ಪ್ರೋತ್ಸಾಹಿಸುವ ಉತ್ತೇಜಿಸುವ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರು. ಜಯದೇವಿತಾಯಿಲಿಗಾಡೆಯವರ ಧನಸಹಾಯದಿಂದ ಪ್ರಾರಂಭವಾದ ಧಾರವಾಡದ ಮಾಧ್ಯಮಿಕ ಶಾಲೆ ಮತ್ತು ಹುಬ್ಬಳ್ಳಿಯ ಭಾರತಿ ಹೈಸ್ಕೂಲುಗಳು ಈಗಲೂ ಇವೆ.

ಔದ್ಯೋಗಿಕ ಕೇಂದ್ರ ಸಂಸ್ಥೆಗಳಲ್ಲಿ ಸಾಕ್ಷರತಾ ಕೇಂದ್ರಗಳನ್ನು ಸ್ಥಾಪಿಸುವಲ್ಲಿ ಜಯದೇವಿತಾಯಿಲಿಗಾಡೆಯವರು ನೇತೃತ್ವ ವಹಿಸಿದ್ದರು. ಸುಮಾರು ಇನ್ನೂರಕ್ಕೂ ಹೆಚ್ಚು ಕೇಂದ್ರಗಳು ಸ್ಥಾಪನೆಯಾಗಿದ್ದವೆಂದರೆ ಅದರ ವ್ಯಾಪ್ತಿ ಮತ್ತು ಮಹತ್ವವನ್ನು ತಿಳಿಯುತ್ತದೆ. ಕನ್ನಡದ ಈ ರೀತಿ ಅಭಿವೃದ್ಧಿಯ ಬಗ್ಗೆ ವಿಚಲಿತರಾದ ಮರಾಠಿ ಪರ ಆಡಳಿತಗಾರರು ಕನ್ನಡ ಸಾಕ್ಷರತಾ ಕೇಂದ್ರಗಳಿಗೆ ಬೆಂಬಲವಾಗಿದ್ದ ಅಧಿಕಾರಿಗಳನ್ನು ಎತ್ತಂಗಡಿ ಮಾಡಿಸಿ ಕಿರುಕುಳ ನೀಡುತ್ತಿದ್ದರು. ಆದರೂ ಜಯದೇವಿತಾಯಿಲಿಗಾಡೆಯವರು ತಮ್ಮ ಪ್ರಯತ್ನ ಮುಂದುವರೆಸಿದರು. ಕಾರ್ಮಿಕರಲ್ಲದ ವ್ಯಾಪಾರಸ್ಥರಿಗೆ ಓದುವ ಆಸಕ್ತಿ ಬೆಳೆಸಲು ತಮ್ಮ ಸ್ವಂತ ಖರ್ಚಿನಲ್ಲಿ ಪುಸ್ತಕ–ಪತ್ರಿಕೆಗಳನ್ನು ಒದಗಿಸಿಕೊಡುತ್ತಿದ್ದರು.

ವರದಕ್ಷಿಣೆ ಪದ್ಧತಿಯನ್ನವರು ಪ್ರತಿಭಟಿಸುತ್ತಿದ್ದರು ಮತ್ತು ಜಾಹಿರಾತುಗಳಲ್ಲಿ ಮಹಿಳೆಯರನ್ನು ಅಸಭ್ಯವಾಗಿ ತೋರಿಸುವುದನ್ನು ಪ್ರತಿಭಟಿಸಿದ್ದರು.

ಜಯದೇವಿತಾಯಿಲಿಗಾಡೆಯವರ ಕನ್ನಡಕ್ಕಾಗಿ ಸರ್ವಸಮರ್ಪಣೆ ಮಾಡಿ ಕನ್ನಡವೇ ನನ್ನ ಧರ್ಮವೆಂದವರು

ಎಲ್ಲಾ ಬಲ್ಲವಳೆಂಬ ಭ್ರಮೆಯು ಎನಗಿಲ್ಲ

ಬಲ್ಲವರ ಪಾದ ಹಿಡಿಯುವೆ

ಬಲ್ಲಿದರು ಕಲಿಸಿರಿ ಮತ್ತು ನುಡಿಸಿರಿ ಎಂದು ತಮ್ಮ ವಿನೀತಭಾವವನ್ನೇ ಡಾ. ಜಯದೇವಿತಾಯಿಲಿಗಾಡೆಯವರು ಮೆರೆದಿದ್ದರು.

1974ರಲ್ಲಿ ಮಂಡ್ಯದಲ್ಲಿ ನಡೆದ 48ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಮಾತನಾಡಿದ ಮಾತುಗಳು ಕರ್ನಾಟಕದ ಇತಿಹಾಸದ ಭೌತಿಕ ಜಗತ್ತಿನಲ್ಲಿ ಸ್ತುತ್ಯಾರ್ಹವಾದುದು. ಸಮಗ್ರ ಕರ್ನಾಟಕದ ಬಗ್ಗೆ, ಕನ್ನಡಿಗರ ಬಗ್ಗೆ, ಕನ್ನಡಿಗರ ಭವಿಷ್ಯದ ಮುನ್ನೋಟದ ಬಗ್ಗೆ, ಕರ್ನಾಟಕದ ಪರಿಕಲ್ಪನೆ ಕುರಿತು ಹೀಗೆ "ಎಲ್ಲಾ ರಾಜಕೀಯ ಏರುಪೇರುಗಳನ್ನು ಮೀರಿದ ಜಾತಿ ಮತಭೇದಗಳಿಂದ ಹೊರತಾಗಿ ರೂಪುಗೊಳ್ಳಬೇಕಾದ ಕರ್ನಾಟಕವೇ ನಮ್ಮ ಕರ್ನಾಟಕ" ಎಂಬ ಕರ್ನಾಟಕದ ಸರ್ವಾಂಗೀಣ ರೂಪುರೇಷೆಯ ವೈಚಾರಿಕತೆಯನ್ನು ಪ್ರಸ್ತಾಪಿಸಿದರು.

ಹೊಣೆಗಾರಿಕೆ ಅಥವಾ ಉತ್ತರದಾಯಿತ್ವ ಪ್ರತಿಯೊಬ್ಬರ ಜವಾಬ್ದಾರಿ. ದುಡಿಮೆಯಿಲ್ಲದೆ ಸಂಬಳ ಬಯಸುವುದು. ಸತತ ಅಭ್ಯಾಸ ಅಧ್ಯಯನಗಳಿಲ್ಲದೆ ಸಾಹಿತ್ಯಕ್ಕೆ ಗಂಟು ಬೀಳುವುದು. ಅರ್ಹತೆಗಳಿಲ್ಲದೆ ಅಧಿಕಾರಕ್ಕೆ ಹಾತೊರೆಯುವುದು. ಚಾರಿತ್ರ್ಯವಿಲ್ಲದೆ ಗೌರವಗಳಿಗೆ ಕೈಚಾಚುವುದು. ಮತಿಗಿಂತ ಮತಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದು" ಇವರೆಲ್ಲಾ ರಾಷ್ಟ್ರೀಯ ಜೀವನವನ್ನು ಅಸ್ತವ್ಯಸ್ತಗೊಳಿಸುತ್ತದೆಂದಿದ್ದರು.

ಭಾಷೆಯ ಮುನ್ನೋಟದ ತಿಳಿಸುತ್ತಾ ಕನ್ನಡ; ಕಥೆ, ಕಾವ್ಯ, ಕಾದಂಬರಿ, ನಾಟಕಗಳಿಗಷ್ಟೇ ಸೀಮಿತಗೊಳ್ಳದೆ ವೈದ್ಯಶಾಸ್ತ್ರ ವಿಜ್ಞಾನ–ತಂತ್ರಜ್ಞಾನ ಮೊದಲಾದ ಜಾಗತಿಕ ಜ್ಞಾನಶಿಸ್ತುಗಳಲ್ಲಿ ಅಭಿವ್ಯಕ್ತಿಸಲು ಕನ್ನಡ ಭಾಷೆ ಸಮರ್ಥ ಕಸುವಿನ ಭಾಷೆಯಾಗಬೇಕೆಂಬ ಸದಾಶಯ ಹೊಂದಿದ್ದರು.

ಎಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ವಿಚಾರಗಳನ್ನು, ಬರಹಗಳನ್ನು ಹತ್ತಿಕ್ಕಲಾಗುತ್ತದೆಯೋ ಅಲ್ಲೇಲ್ಲಾ ನಾಡಿನ ವಿಕಾಸಕ್ಕೆ ಧಕ್ಕೆಯುಂಟಾಗುತ್ತದೆ. ಹಾಗಾಗಿ ಲೇಖಕರು, ಬರಹಗಾರರಿಗೆ ಇರಬೇಕಾದ ಮುಕ್ತ ಸ್ವಾತಂತ್ರ್ಯದ ಕುರಿತು ಒತ್ತಾಯಿಸುತ್ತಾರೆ.

ಡಾ. ಜಯದೇವಿತಾಯಿಲಿಗಾಡೆಯವರ ನಿರಂತರ ಪ್ರಯತ್ನಗಳು ಮರಾಠಿಗರ ಕುತಂತ್ರದಿಂದ ಹಾಗೂ ಕನ್ನಡಿಗರ ನಿಷ್ಕ್ರಿಯತೆಯಿಂದ ಕನ್ನಡಿಗರು ಎಲ್ಲಾ ರೀತಿಯಲ್ಲೂ ಹೆಚ್ಚಾಗಿದ್ದಾರೆಂಬುದು ಸರ್ವವೇದ್ಯವಾಗಿದ್ದರೂ ಸೊಲ್ಲಾಪುರ ಕರ್ನಾಟಕಕ್ಕೆ ಸೇರದೆ ಮಹಾರಾಷ್ಟ್ರ ರಾಜ್ಯದಲ್ಲುಳಿಯಿತು. ಈ ಕಾರ್ಯಕ್ಕಾಗಿ ಅವರು ಎಲ್ಲಾ ಮಂತ್ರಿಗಳು, ಕಡೆಗೆ ಇಂದಿರಾಗಾಂಧಿಯವರನ್ನು ಭೇಟಿ ಮಾಡಿ ಮಹಾಜನ ಆಯೋಗದ ಶಿಫಾರಸ್ಸು ಅನ್ವಯಿಸಿ ಸೊಲ್ಲಾಪುರ ಕರ್ನಾಟಕದ ಭಾಗವಾಗಬೇಕೆಂದು ಮನವಿ ಸಲ್ಲಿಸಿ ಅವರಿಂದ ಆಶ್ವಾಸನೆ ಪಡೆದುಕೊಂಡರೂ ಕನ್ನಡದ ಮಂತ್ರಿಗಳ ಮತ್ತು ಶಾಸಕರ ಔದಾಸೀನ್ಯ ಅದನ್ನು ಆಗಗೊಡಲಿಲ್ಲ.

ಹೈದರಾಬಾದ್ ಪ್ರಾಂತ್ಯದ ಅನೇಕ ಭಾಗಗಳಲ್ಲಿ ವಲಸೆಹೋಗಿದ್ದ ಕನ್ನಡಿಗರೆಲ್ಲರಿಗೂ ಬೆಂಬಲವಾಗಿ ನಿಂತು ಆಮೂಲಕ ಆ ಭಾಗಗಳಲ್ಲಿ ಕನ್ನಡತನವನ್ನು ಉಳಿಸಿದರು. ಅಲ್ಲಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಭಿಸಿದರು. ಸ್ವಯಂಸೇವಾ ಶಿಕ್ಷಕರನ್ನು ಕಳಿಸಿದರು. ಆಗಿನ ಮುಖ್ಯಮಂತ್ರಿಗಳು 'ಕನ್ನಡ ಶಾಲೆಗಳಿಗೆ ಕನ್ನಡ ಶಿಕ್ಷಕರೇ ಸಿಗುವುದಿಲ್ಲ' ಎಂಬ ಕಾರಣಕೊಟ್ಟು ಮುಂದೂಡಿದಾಗ ಡಾ. ಜಯದೇವಿತಾಯಿಲಿಗಾಡೆಯವರು  ತಮ್ಮ ಸ್ವಂತ ಖರ್ಚಿನಿಂದ ನಾನ್ನೂರು ಜನ ಶಿಕ್ಷಕರನ್ನು ನೇಮಿಸಿದ್ದು ಅವರ ಕನ್ನಡ ಪ್ರೇಮಕ್ಕೆ ಸಾಕ್ಷಿಯಾಗಿದೆ.

## ಜಯದೇವಿತಾಯಿಲಿಗಾಡೆಯವರನ್ನು ಸ್ಮರಿಸಿ ಶ್ಲಾಘಿಸುವ ಪರಿಗಳು

ಗಡಿಭಾಗದ ಸಿಂಹಿಣಿ ಡಾ. ಜಯದೇವಿತಾಯಿಲಿಗಾಡೆಯವರು ನಡೆದು ಬಂದ ದಾರಿಯ ಕುರಿತು ಮತ್ತು ಬಾಳಿ ಬದುಕಿದ ರೀತಿಯ ಕುರಿತು ಡಾ.ಜಿ.ಬಿ. ಪೂಜಾರಿ ಅವರು 'ಕನ್ನಡ ತಾಯಿ' ಎಂಬ ಪದ್ಯವನ್ನು ರಚಿಸಿದ್ದಾರೆ.

"ಕನ್ನಡ ತಾಯಿ ಧೀಮಂತ ಅಭಿಮಾನಿಗಳು ನುಡಿಯ ಪ್ರೇಮಿಗಳು

ಇರಬೇಕಿತ್ತು ಕರ್ನಾಟಕದೊಳಗೆ ಆದರೂ ಹೊರಗಿನಿಂದಲೇ ನೀವೆಷ್ಟು ದುಡಿದಿರಿ

ಅದರಲ್ಲೇ ಹಣ್ಣಾದಿರಿ ತಲೆಯೆತ್ತಿ ನಡೆದಿರಿ ಅನುದಿನವು ಧ್ಯಾನಿಸಿದಿರಿ

ಸೊಲ್ಲಾಪುರ ಸೇರಲಿ ಕನ್ನಡ ನಾಡಿನೊಳಗೆಂದು

ಘಟಾನುಘಟಿಗಳೆದುರು ಧ್ವನಿಯೆತ್ತಿ ಸಾರಿದಿರಿ

ಹತ್ತಿಯಂತ ದೇಹ, ಬೆಳ್ಳಿಯಂತ ಮನಸ್ಸು, ಬಂಗಾರದಂತ ಮಾತು, ಮುತ್ತಿನಂತ ಮೊಗ

ನಿಮ್ಮ ಕಂಡಾಗಲೆಲ್ಲಾ ಅನಿಸುತ್ತಿತ್ತು.

ಇವಳೇ ನಮ್ಮ ಕನ್ನಡದ ತಾಯಿಯೆಂದು

ಕನ್ನಡ ಕೋಟೆ ಕಟ್ಟಿ ಕೋಟೆ ಹೊರಗೂ ಕನ್ನಡ ಬೆಳೆಸಿದಿರಿ

ಕಲ್ಯಾಣಕ್ಕೆ ಅಂದು ಸಿದ್ಧರಾಮ ಬಂದಿದ್ದ. ಇಂದು ನೀವು ಬಂದಿರಿ

ಪದವಿಗಳಿಗಾಗಿ ಜನ ದುಡಿದರೆ ನಿಮ್ಮ ದುಡಿಮೆಯೇ ನಿಮ್ಮ ಪದವಿಯಾಯಿತು

ಶಂಖ ಜಾಗಟೆಗಳಿಲ್ಲದೆ ಡೋಲು ತುತ್ತೂರಿಗಳಿಲ್ಲದೆ

ಮೌನವಾಗಿಯೇ ಕನ್ನಡದ ಸೇವೆ ಮಾಡಿದಿರಿ

ಅಂತೆಯೇ ಇದೋ ನಿಮಗೆ ಸಾವಿರ ನಮನ

ಹೇಡಿಕುಲದವಳಲ್ಲ ಅಳ್ಳೆದೆಯ ಅಳುಬುರುಕಳಲ್ಲ

ಬೇಡಿ ಮರುಗೇನು ಆಸರ ಮನುಜರ

ಕಾಡು ನೋಡಲಿ ಪರಿಪರಿ" ಎಂದು ಜಯದೇವಿತಾಯಿಲಿಗಾಡೆಯವರನ್ನು ಸ್ತುತಿಸಿದ್ದಾರೆ.

ಹಾಗೆಯೇ ಡಾ. ರಾಮಕೃಷ್ಣ ಮರಾಠಿ, ಡಾ. ಕಲ್ಯಾಣ ರಾವ್ ಪಾಟೀಲ್, ಡಾಕ ಸರೋಜಿನಿ ಚೌಲ ಮೊದಲಾದವರು ಪುಸ್ತಕ ಬರೆದಿದ್ದಾರೆ.

ಡಾ. ಜಯದೇವಿತಾಯಿಲಿಗಾಡೆಯವರ ಸಿದ್ಧರಾಮಪುರಾಣ ಕೃತಿಯನ್ನು ಕುರಿತು ಡಾ.ವಿ.ಕೃ. ಗೋಕಾಕರು "ಮಹಿಳಾ ಹೃದಯದ ರಸಾನುಭವದ ಸಂಪತ್ತನ್ನೆಲ್ಲಾ ಈ ಕೃತಿ ಸೂರೆಮಾಡಿಕೊಂಡಿದೆ. ಹಿಂದೆ ಅನಾಮಧೇಯವಾಗಿ ತನ್ನ ಸುಖ–ದುಃಖ ಮತ್ತು ಭಕ್ತಿಗಳನ್ನು ಜಾನಪದ ತ್ರಿಪದಿಯಲ್ಲಿ ತೋಡಿಕೊಂಡ ತಾಯಿಯ ಹೃದಯ ಸಿದ್ಧರಾಮಪುರಾಣದಲ್ಲಿದು ಪ್ರಜ್ಞಾಪೂರ್ವಕವಾಗಿ ಅದೇ ಸೊಗಸಿನ ಹಾಡನ್ನು ಹಾಡಿದೆ. ಡಾ. ಜಯದೇವಿತಾಯಿಲಿಗಾಡೆಯವರ ಈ ಕೃತಿ ಘನವಾದುದು. ಅದಕ್ಕೂ ಘನತರವಾಗಿ ಹಿಂದೆ ಚಾರಿತ್ರ್ಯ ನಿಂತಿದೆ" ಎಂದು ಪ್ರಶಂಸಿಸಿದ್ದಾರೆ.

ಡಾ. ಜಿ.ಪಿ.ರಾಜರತ್ನಂ ಅವರು "ತಾಯಿ ಡಾ. ಜಯದೇವಿ ಲಿಗಾಡೆಯವರು ಹತ್ತು ವರ್ಷಗಳ ತಪಸ್ಸಿನಿಂದ ಆರನೂರ ಪುಟಗಳ ಶ್ರೀಸಿದ್ಧರಾಮಪುರಾಣ ಎಂಬ ಬೃಹತ್ ಕೃತಿಯನ್ನು ರಚಿಸಿದ್ದಾರೆ. ಈ ರೀತಿಯ ಕಾವ್ಯಗಳಲ್ಲಿ ಮೊದಲನೆಯದು ಮಾಸ್ತಿಯವರ 'ನವರಾತ್ರಿ', ಎರಡನೆಯದು ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ', ಮೂರನೆಯದು 'ಶ್ರೀಸಿದ್ಧರಾಮಪುರಾಣ', ಕವಯಿತ್ರಿ ಸೊಲ್ಲಾಪುರದ ಕನ್ನಡ ಕೋಟೆಯ ತಾಯಿ ಜಯದೇವಿ. ಇವರು ಸಂಚಿಯ ಹೊನ್ನಮ್ಮನ ನಂತರ ಕಾವ್ಯರಚನೆಯಲ್ಲಿ ಯಶಸ್ಸು ಸಾಧಿಸಿದವರು. ಇನ್ನೂ ಒಂದು ವಿಶೇಷವೆಂದರೆ ಸರ್ವಜ್ಞ ಕವಿಯ ತ್ರಿಪದಿ ಛಂದಸ್ಸಿನಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಪದ್ಯಗಳುಳ್ಳ ಮಹಾಕಾವ್ಯ ರಚಿಸಿದವರು ಎಂಬುದರಲ್ಲಿ ಸಂದೇಹವಿಲ್ಲ" ಎಂದು ಮನಸಾರೆ ಮೆಚ್ಚಿಕೊಂಡಾಡಿದ್ದಾರೆ.

## ಡಾ. ಜಯದೇವಿತಾಯಿಲಿಗಾಡೆಯವರ ಅತ್ಯಾಪೂರ್ವ ಸಾಧನೆಗಳು

ಜಯದೇವಿತಾಯಿಲಿಗಾಡೆಯವರು ಸಾಹಿತ್ಯ ಕ್ಷೇತ್ರ, ಮಹಿಳಾ ಸಂಘಟನೆಗಳು, ಸೇವಾದಳ, ಲಿಂಗಾಯತ ಪರಿಷತ್ತು, ಸಾಕ್ಷರತಾ ಮಂಡಲಿ, ಕರ್ನಾಟಕದ ವಿದ್ಯಾವರ್ಧಕ ಸಂಘ ಹಾಗೂ ಹಲವು ವಿಶ್ವವಿದ್ಯಾಲಯಗಳಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಸಕ್ರಿಯಾಶೀಲರಾಗಿದ್ದರು.

ಇಂಥ ಮಹಾನ್ ತಾಯಿಗೆ ಸಂದ ಗೌರವಪುರಸ್ಕಾರಗಳಿಗೆ ಲೆಕ್ಕವಿಲ್ಲ. ರಾಜ್ಯ ಸಾಹಿತ್ಯ ಮತ್ತು ಲಲಿತಕಲಾ ಅಕಾಡೆಮಿಗಳ ಪ್ರಶಸ್ತಿ, 1974ರಲ್ಲಿ ಮಂಡ್ಯದಲ್ಲಿ ನಡೆಸಿದ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಪಥಮ ಮಹಿಳಾ ಅಧ್ಯಕ್ಷತೆ, ಕರ್ನಾಟಕದ ವಿಶ್ವವಿದ್ಯಾಲಯದ ಜಾನಪದ ಸಮ್ಮೇಳನದ ಅಧ್ಯಕ್ಷತೆ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಡಿ.ಲಿಟ್ ಪದವಿ ಮೊದಲಾದ ಪ್ರಶಸ್ತಿ ಗೌರವಗಳು ಡಾ. ಜಯದೇವಿತಾಯಿಲಿಗಾಡೆಯವರಿಗೆ ಸಂದಿವೆ. ಹಾಗೆ ನೋಡಿದರೆ ತಾಯಿವರೆಂದು ಪ್ರಶಸ್ತಿ ಪುರಸ್ಕಾರಗಳ ಬೆನ್ನತ್ತಿದವರಲ್ಲ. ಬ್ರಿಟಿಷರು ನೀಡಿದ ಪ್ರಶಸ್ತಿಯನ್ನು ಡಾ. ಜಯದೇವಿತಾಯಿ ಲಿಗಾಡೆಯವರು ಅತ್ಯಂತ ನಿಷ್ಠುರವಾಗಿ ನಿರಾಕರಿಸಿದವರಾಗಿದ್ದರು.

ಹೆಣ್ಣುಮಗಳೊಬ್ಬರು ಅತಂಹ ಜಟಿಲ ಕಾಲಮಾನದಲ್ಲಿ ಅದೂ ಒಂದೇ ಜೀವಮಾನದಲ್ಲಿ ಮಹಿಳಾ ಇತಿಮಿತಿಗಳ ಪರಿಧಿಯಲ್ಲಿ ಇಷ್ಟೊಂದು ರೀತಿಯ ವೈವಿಧ್ಯಪೂರ್ಣ ಸಾಧನೆಗಳನ್ನು ಸಾಧಿಸಿರುವುದು ಇತಿಹಾಸದಲ್ಲಿ ವಿರಳ ಮತ್ತು ಆಶ್ಚರ್ಯಾದ್ಭುತವೆನಿಸುತ್ತದೆ. ಅವರ ಅಪ್ರತಿಮ ಪರಿಶ್ರಮಕ್ಕೆ ಸಮಂಜಸವಾದ ಪ್ರತಿಫಲವನ್ನವರು ಪಡೆಯಲಾಗಲಿಲ್ಲ. ಜಯದೇವಿತಾಯಿಲಿಗಾಡೆಯವರೆಂದೂ ಯಾವ ಅಧಿಕಾರವನ್ನೂ ತಮ್ಮ ಕನಸು–ಮನಸ್ಸಿನಲ್ಲಿಯೂ ಬಯಸಿದವರಲ್ಲ. ಒಂದು ಕ್ಷಣದ ಕಾಲವ್ಯಯವನ್ನು ಮಾಡಲಿಲ್ಲ. ನಾಡು–ನುಡಿಗಾಗಿ, ನೆಲ–ಜಲಗಳಿಗಾಗಿ, ದೀನದುರ್ಬಲರಿಗಾಗಿ ಹಾಗೂ ಮಹಿಳೆಯರಿಗಾಗಿ ಡಾ. ಜಯದೇವಿತಾಯಿಲಿಗಾಡೆಯವರು ಮಾಡಿದ ಅನನ್ಯ ಸೇವೆ ಹಾಗೂ ಸಚ್ಚಿಂತನೆಗಳು ಅವಿಸ್ಮರಣೀವಾಗಿವೆ. ಇಂಥ ಮಹಾನ್ ಕನ್ನಡ ತಾಯಿ ಜುಲೈ 25, 1986ರಂದು ದೈವಾಧೀನರಾದರು.

**ಪರಾಮರ್ಶನಗಳು:–**

1. ಡಾ. ವಿಕ್ರಮ್ ವಿಸಾಜಿ 25–2–2021, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ੭ಣಣಠಿ://ಥಿರಾಣಣ.ಛಜ/ತಿಡಿಛಿಟ8ಜಛಗಿಜಖ8

2. **ಜಯದೇವಿ ತಾಯಿ ಲಿಗಾಡೆ.** ಸಹೃದಯಿ, ੭ಣಣಠಿ://ಥಿರಾಣಣ.ಛಜ/:ಜಇಡಫರಖಿಗಿಏ7ಂ

3. **ಜಯದೇವಿತಾಯಿ ಲಿಗಾಡೆ** । ಎಂಜಂಆಇಗಿಖ ಖಂಜಖ ಐಖಉಂಆಇ ಕಡಿಚಿಂಚಿಣು ಖಿಗಿ ಆಉಣಚಿಟ ੭ಣಣಠಿ://ಥಿರಾಣಣ.ಛಜ/ಜಚ_ಇಎ8ಖಿಗಜ6ರ

4. **ಡಾ. ಜಯದೇವಿ ತಾಯಿ ಲಿಗಾಡೆ ಅವರ ವಚನ – ನಿರ್ವಚನ : ಡಾ. ಎಚ್. ಎಸ್ ಸತ್ಯನಾರಾಯಣ ಅವರು** ಜೀವನ ಪ್ರೀತಿ ಅಂಕುರ ੭ಣಣಠಿ://ಥಿರಾಣಣ.ಛಜ/ರಿ7ಥಿ-ಚಿ:ಖಟಆರ

5. **ಡಾ. ಗುರುಲಿಂಗಪ್ಪ ಧಬಾಲೆ – ಶರಣೆ ಜಯದೇವಿತಾಯಿ ಲಿಗಾಡೆ** :ಚಿಚಿತಚಿ ಖಚಿಟುಣು ੭ಣಣಠಿ://ತಿತಿತಿ.ಥಿರಾಣಣಛಜ.ಛಿರಟ/ಟುತಜ/ಕಿಫಡಇ_ಆಇಅ77ಗ?ಜಿಜಚಿಣಾಡಜ=੭ಚಿಡಜ

6. ,ಠಿಜಜಛು ರಟ 'ಎಚಿಥಿಚಿಜಜತುಣಚಿ ಖುರಚಿಜಜ' ಗಿಚಿಛುಚಿಟಚಿ ನಿಮ್ಮ ಬಸವರಾಜ ಡೋಣೂರ ੭ಣಣಠಿ://ಥಿರಾಣಣ.ಛಜ/ಟಖಿಠಿಡರಿಣಗಥಿ0ದಇ

7. **ಜಯದೇವಿ ತಾಯಿ ಲಿಗಾಡೆ** ੭ಣಣಠಿ://ಇಟ.ತಿಇಉಠಿಜಜುಚಿ.ಠಡಿರ/30ರ ವಿಕಿಪೀಡಿಯ ಮುಕ್ತ & ಸ್ವತಂತ್ರ ವಿಶ್ವಕೋಶ.





**ಡಾ. ಪೂರ್ಣಿಮಾ ಎಸ್.**

ಮುಖ್ಯಸ್ಥರು, ಕನ್ನಡ ವಿಭಾಗ,

ಶೇಷಾದ್ರಿಪುರಂ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜ್,

ಶೇಷಾದ್ರಿಪುರಂ, ಬೆಂಗಳೂರು–560020.